Reg. No. M. 1550. KODAGU 27-9-1935

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಪೆಟ್ಟಿಗೆ
ಮುದ್ರಣ ಕಲಸಕ್ಕೆ
"ಕೊಡಗು"
ಪ್ರೆಸ್ಸು,
ಮಡಿಕೇರಿ.

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ವಾರ್ಷಿಕ ಚಂದಾ ರೂ. ೩-೮-೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಅಸವಿ ಸಪ್ಟಂಬರ್ ತಾರೀಕು ೨೭ನೇ ಶುಕ್ರವಾರ. [ಸಂಚಿಕೆ ೧೯೭

By Appointment
To H. E. The Governor of Madras.

CUPS AND MEDALS.





Telephone: 3145

Telegrams: 'PRECIOUS.'



V. SUBRAMANIA IYER.
Jeweller, & Diamond Merchant,
52-45 2 & 3 Kappalathu Street Tiruvateswaranpet. MADRAS. POST BOX 423 TRIPLICANE.
Catalogue & special designs with quotations (free) on enquiry

THE CANARA BANKING CORPORATION
UDIPI, LTD.,

Established 1906.] [Incorporated in British India.
Head office:—UDIPI (S. Kanara.)

It will pay you if you call at our offices at
MERCARA OR VIRARAJENDRAPET

(1) Fixed Deposits are now accepted up to 5%.
(2) Current accounts opened free of any charge and interest allowed up to 2%.
(3) Savings Bank accounts—Interest allowed at

3½%

Special facilities offered—(1) Withdrawals allowed by cheques.
(2) Production of pass books unnecessary at each withdrawal
(3) Accounts transferred from one office to another free of any charges.
(4) Cumulative Deposits—a speciality.

Advances granted on approved securities on easy terms.

All kinds of banking business transacted For further particulars please apply to any of our offices.

Udipi. M. Srinivasa Prabhu,
29—7—1935. 52—46 Manager,

ಪತ್ರಿಕೆಗಳಲ್ಲಿ ನಿಷ್ಪಕ್ಷಪಾತವಾಗುವಷ್ಟು ಆಲ್ಲಿ ಕಾರ್ಯಸ್ಥಿತಿ ಮತ್ತು ಸಂಖ್ಯೆಗಳು ನಿಜಾಂಶವನ್ನು ವ್ಯಕ್ತಗೊಳಿಸುವವು.

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.

ಈ ಏಮೂ ಸಂಸ್ಥೆಯು ಕಠಿಣ ಶೋಧನೆಗಳನ್ನು ಈ ಫಲಿತಾಂಶಗಳಿಂದ ಧಿಕ್ಕರಿಸಿರುವದು.

ಜಾರಿಯಲ್ಲಿರುವ ವಿಮೆಮೊಬಲಗು (ಹೊಣ್ಣು) 265 ಲಕ್ಷ
ಲೇವಾದೇವಿಯಲ್ಲಿರುವಮೊಬಲಗು ಸುಮಾರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಕೆಚ್ಚ) ರೂ. 16 ಲಕ್ಷ
ಏಮೂ ಹಕ್ಕುಗಳ ಪಾವತಿ ರೂ. 33 ಲಕ್ಷ

ಬೋನಸ್ಸನ್ನು ಬೇರೆ ಕಂಪೆನಿಗಳಿಗಿಂತ ಅಧಿಕ

ಜೀವನಾಧಿ ಪಾಲಿಸಿಗಳಿಗೆ ಸಾಲದಮೇಲೆ ರೂ. 25%
ಎಂಡೋಮೆಂಟ್ ಪಾಲಿಸಿಗಳಿಗೆ ಸಾಲದಮೇಲೆ ರೂ. 20%

ಕಂಪೆನಿಯ ಏಜೆಂಸಿಗಳು ವಿಶೇಷ ಲಾಭದಾಯಕ.
ಇತರ ವಿವರಗಳಿಗೆ ಕೂಡಲೇ ಈ ಕೆಳಗಿನವರಿಗೆ ಬರೆಯಿರಿ:—

ಕು. ಡಿ. ಭಾಗವ, ಎಫ್.ಎಸ್.ಎಸ್. (ಲಂಡನ್).
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—

ಎ ಎಸ್ ಎಸ್ ಅಯ್ಯಂಗಾರ್
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್ಸ್, ಚಾಮರಾಜಪೇಟೆ, 3ನೇ ರೋಡು.
52—17 ಬೆಂಗಳೂರು ಸಿ.

ವಿವಿಧ ವಾರ್ತೆಗಳು.

ವಿಖ್ಯಾತ ಕರ್ನಲ್ ಲಾರೆನ್ಸನು ವ್ಯಾಪಕಪಟ್ಟಿರುವನೇ.

ಕಳೆದ ಘೋರಯುದ್ಧದ ಅವಸರದಲ್ಲಿ ಸ್ವತಂತ್ರ ಅರಬ ಸ್ಥಾನದೊಳನುಗ್ಗಿ ವೇಷಾಧಾರಿಯಾಗಿ ಅಲ್ಲಿ ನಾನಾ ಶಾಂತೋಪಾಯಗಳನ್ನು ನಡೆಸಿ ಬ್ರಿಟಿಷರಿಗನುಕೂಲವಾಗುವಂತೆ ಕ್ರಾಂತಿಗಳನ್ನೆಬ್ಬಿಸಿದ ಕರ್ನಲ್ ಲಾರೆನ್ಸ್‌ನೆಂಬವನು ಮಡಿದಿದ್ದನೆಂದು ತಿಳಿದಿದ್ದೆವು. ಆದರೆ, ಅತನೇ ಈಗ ಅಬಿಸೀನಿಯೂದಲ್ಲಿ ವೇಷಾಧಾರಿಯಾಗಿ ನಾನಾ ಷಡ್ಯಂತ್ರಗಳನ್ನು ನಡೆಸುತ್ತಲಿರುವನೆಂದು ಒಂದು ಪ್ರಬಲವಾದ ವಾರ್ತೆಯಿದೆ.

—೦೦೦—

ಮಕ್ಕಳನ್ನು ಪೋಷಿಸದ ತಂದೆಗಳಿಗೆ ಶಿಕ್ಷೆ.

ಸೋವ್ಹಿಯೆಟ್ ರಷ್ಯದಲ್ಲಿ ಮಕ್ಕಳ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳದ ತಾಯಿ ತಂದೆಗಳನ್ನು ದಸ್ತಗಿರಿಮಾಡಿ ಕಾರಾಗೃಹದಲ್ಲಿಡುವರಂತೆ! 1933ರಲ್ಲಿ 142,000 ಜನ ತಂದೆಯರೂ, 1934ರಲ್ಲಿ 2 ಲಕ್ಷಕ್ಕೆ ಏರಿದ ತಂದೆಯರೂ, ತಮ್ಮ ಮಕ್ಕಳ ಜೀವನಾಂಶವನ್ನು ಕೊಡದೆ ತಪ್ಪಿದ್ದರಿಂದ, ಶಿಕ್ಷೆಗೆ ಗುರಿಯಾದರು.

—೦೦೦—

ಹಿಂದೂ ದೇಶದಲ್ಲಿ ವಿಪುಲ ಎಣ್ಣೆಯ ಗನಿಗಳು.

700 ವರ್ಷಗಳಿಗೆ ಬೇಕಾಗುವಷ್ಟು ಎಣ್ಣೆಯು ದೊರೆಯುವದು

ಹಿಂದೂ ದೇಶದಲ್ಲಿ ಧಾರಾಳ ಎಂಜಿನುಳ್ಳ ಮಹತ್ವದ ಎಂಜಿ ಗನಿಗಳನ್ನು ಶೋಧಕರು ಕಂಡು ಹಿಡಿದಿದ್ದಾರೆ. ಇವುಗಳಿಂದ ಒದಗುವ ಎಂಜಿಯು ಹಿಂದೂಸ್ಥಾನಕ್ಕೆ 700 ವರ್ಷಗಳಿಗೆ ಸಾಕಾಗುವುದು. ಈ ಗನಿಗಳನ್ನು ಲಾಭಕರವಾಗಿ ನಡೆಸಲು ಕಂಪೆನಿಗಳು ಸ್ಥಾಪನೆಯಾಗುವುವು. ಈ ಕಾರ್ಯಕ್ಕೆ 1 ಕೋಟಿ ರೂಪಾಯಿ ವೆಚ್ಚ ತಗಲುವುದು. ವರ್ಷ ಒಂದಕ್ಕೆ 5 ಕೋಟಿ ರೂಪಾಯಿಗಳನ್ನು ಹಿಂದೂ ದೇಶದಲ್ಲಿ ಉಳಿಸಬಹುದು.

—೦೦೦—

ಕಾಂಗ್ರೆಸಿನ ಮುಂದಿನ ಅಧ್ಯಕ್ಷರಾರು?

ಪಂಡಿತ ಜವಾಹಿರಲಾಲರೇ?

ಕಾಂಗ್ರೆಸಿನ ಮುಂದಿನ ಅಧ್ಯಕ್ಷ ಪದವಿಯನ್ನು ಸ್ವೀಕರಿಸಲು ಯಾರೂ ಸನ್ನದ್ಧರಾಗಿರುವರಂತೆ ತೋರುವದಿಲ್ಲ. ಶ್ರೀ. ಆರ್. ರಾಜಗೋಪಾಲಾಚಾರ್ಯರನ್ನೇ ವಡಬೇಕೆಂದುಹಲವರು ಅಪೇಕ್ಷಿಸಿದ್ದರೂ ಅವರು ನಿರಾಕರಿಸಿರುವರಂತೆ ಇನ್ನು ಪಂಡಿತ ಜವಾಹಿರಲಾಲರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಹಲವರ ಅಭಿಪ್ರಾಯ. ಪಂಡಿತರು ಸದ್ಯಕ್ಕೆ ಯುರೋಪಿನಲ್ಲಿ ಅವರ ಪತ್ನಿಯವರ ಸಮೀಪದಲ್ಲಿರುವರು. ಇದರಿಂದಲ್ಲಿ ಡಾ. ಪಟ್ಟಾಭಿ ಸೀತಾರಾಮಯ್ಯನವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಬಿಜವಾಡದಲ್ಲಿನ ಒಂದು ಸಭೆಯಲ್ಲಿ ಠರಾವುಗಳು ಪಾಸಾಗಿರುವದಂತೆ. ಯಾವದೂ ಇನ್ನೂ ನಿಷ್ಕರ್ಷಿತವಾಗಿರುವುದಿಲ್ಲ.

—೦೦೦—

127 ವರ್ಷ ಪ್ರಾಯ

200 ಮೊಮ್ಮಕ್ಕಳ ವೃದ್ಧ ಪಿತಾಮಹ.

ಈರಾನು ಜಿಲ್ಲೆಯಲ್ಲಿ ಮೇಷೀಡೀಗುರ್ಬನ್ ಆಲಿ ಎಂಬ ವ್ಯವಸಾಯಗಾರನ ವಯಸ್ಸು 125. ಬಹಳ ಬಲಶಾಲಿಯೂ ಗಿರುವನು. ಇವನ ದೊಡ್ಡ ಮಗನ ವಯಸ್ಸು 100, ಹಿರಿಯ ಮಗಳ ವಯಸ್ಸು 95; 30 ಮಂದಿ ವೈಶಮ್ಮಕ್ಕಳು ಇರುವರು. ಇದುವರೆಗೂ ಮೂರುಬಾರಿ ಮದುವೆ ಮಾಡಿಕೊಂಡನು. ಹುಟ್ಟಿದ್ದು 18 80ಲ್ಲಿ. ಸ್ವಲ್ಪ ಕಿವುಡು ಆಗಿದ್ದರೂ, ಇದುವರೆಗೂ ಯಾವ ವ್ಯಾಧಿಯಿಂದಲೂ ನರಳಿದವನಲ್ಲ, ದಿನಂಪ್ರತಿ ಬಹಳ ದೂರ ತಿರುಗುವ ಅಭ್ಯಾಸವುಳ್ಳವನು. ಚಿಕ್ಕಂದಿನಲ್ಲಿ 14 ಪೌಂಡು ರೊಟ್ಟಿಯನ್ನು ತಿಂದು 28 ಮೈಲು ದೂರ ನಡೆಯುತ್ತಿದ್ದನು, ಈಗ ಅವನ ಮಿತಾಹಾರ ಹಾಲು. ಒಂದು ಬಾರಿ 650 ಪೌಂಡು ತೂಕದ ಸಲ್ಲನ್ನ ತಲೆಯ ಮೇಲಿಟುಕೊಂಡು ಒಂದೂರಿನಿಂದ 7 ಮೈಲು ದೂರದ ಮತ್ತೊಂದೂರಿಗೆ ನಡೆದು ಹೋದನು. ಎಷ್ಟು ದೂರವಾದರೂ ನಡೆಯುವನು. ಇದುವರೆಗೂ ತನ್ನ ಸ್ವಂತ ಜಿಲ್ಲೆಯನ್ನು ದಾಟಿ ಹೊರಗೆ ಹೋದವನಲ್ಲ.

—೦೦೦—

ಡಾಕ್ಟರನ್ನು ನಂಬಿಸಿ ಒಳ್ಳೇ ಪುಸಕಗಳನ್ನು ಹಾರಿಸಿದ ಜಾಣನು.

ಕಲ್ಕತ್ತೆಯಲ್ಲಿ 'ಕೆಲವು ದಿನಗಳ ಹಿಂದೆ ಒಬ್ಬ ಕಾರುಣನು ಓರ್ವ ಡಾಕ್ಟರರ ಆಫೀಸಿಗೆ ಬಂದು ಅವರ ಕಂಪೌಂಡರ್‌ನೊಡನೆ, ತನ್ನ ಹೆಂಡತಿಗೆ ಸಾಖ್ಯವಿಲ್ಲವಾದ್ದರಿಂದ ಡಾಕ್ಟರನನ್ನು ಕರೆದುಕೊಂಡು ಹೋಗಲು ಬಂದಿರುವೆನೆಂದು ಹೇಳಿದನು. ಡಾಕ್ಟರರು ಅವನೊಡನೆ ಹೊರಗಲೊಪ್ಪಿದರು. ಒಂದು ಗಾಡಿಯನ್ನು ಬಾಡಿಗೆಗೆ ಪಡೆದು, ಇಬ್ಬರೂ ಅತನ ಗೃಹಾಭಿಮುಖವಾಗಿ ತೆರಳಿದರು. ಆದರೆ, ಮಾರ್ಗಮಧ್ಯದಲ್ಲಿ ಕರುಣನು ಒಂದು ಅಂಗಡಿಯ ಬಳಿ ಗಾಡಿಯನ್ನು ನಿಲ್ಲಿಸಿ ತನ್ನ ಸೇವಕನಿಗೆ ಅಂಗಡಿಯ ಬೀಗದ ಕೈ ಕೊಟ್ಟುಬರುವೆನಾಗಿ ಹೇಳಿ ಗಾಡಿಯಿಂದಿಳಿದನು. ಅಂಗಡಿಗೆ ಹೋಗುವ ಬದಲು ಅವನು ಡಾಕ್ಟರ ಆಫೀಸಿಗೆ ನೆಟ್ಟಗೆ ಹೋಗಿ, ಡಾಕ್ಟರು ಹೇಳಿದನೆಂದು ಕೆಲವು ಪುಸ್ತಕಗಳನ್ನು ಪಡಕೊಂಡು ಅವುಗಳೊಡನೆ ಪರಾರಿಯಾದನು. ಇತ್ತ ಡಾಕ್ಟರರು ಬೀದಿಯಲ್ಲಿ ಬಹಳ ಹೊತ್ತು ಕಾದಿದ್ದರೂ ಕರುಣನು ಬಾರದಿರಲು ಪುನಃ ತನ್ನ ಆಫೀಸಿಗೆ ಬಂದಲ್ಲಿ ಸಂಗತಿ ತಿಳಿಯಿತು.—ಪೊಲೀಸರಿಗೆ ಪುಕಾರು ಹೋಗಿದೆ. ಆದರೆ ಆ ತರುಣನನ್ನು ಇನ್ನೂ ಸಿಕ್ಕಿರುವದಿಲ್ಲ.

—೦೦೦—

79 ತಾಸು ನೀರಿನಲ್ಲಿ.

ಬಂಗಾಲಿ ತರುಣನ ಅದ್ವಿತೀಯ ಸಾಹಸ.

ಅಲಹಾಬಾದಿನ ಶ್ರೀ ರಾಬಿನ್ ಚತರ್ಜಿ ಎಂಬ ಬಂಗಾಲಿ ತರುಣರು ಬಹಳ ಹೊತ್ತು ನೀರಲ್ಲಿ ಈಜುವದರಲ್ಲಿ ಹೆಚ್ಚಿನ ವೇಳ್ಮೆಯನ್ನು ತೋರಿಸಿದ ಶ್ರೀ. ಚತರ್ಜಿಯವರು ಕಳೆದ ತಾ. 14 ನೇ ಶನಿವಾರ ರಾತ್ರಿ 1 ಘಂಟೆಗೆ ನೀರಲ್ಲಿ ಇಳಿದು ತಾ. 17 ನೇ ಮಂಗಳವಾರ ಸಾಯಂಕಾಲ 4—41 ರ ವರೆಗೆ, ಅಂದರೆ 79 ತಾಸು 25 ಮಿನಿಟುಗಳ ವರೆಗೆ ನೀರಲ್ಲಿ ಸತತವಾಗಿ ಈಜಿದರು.

ಇಷ್ಟು ಕಾಲಾವಧಿ ವರೆಗೆ ಸತತವಾಗಿ ಈಜಿದವರೇ ಇಲ್ಲ. ಬುಧವಾರ ರಾತ್ರಿ 1 ಗಂಟೆಯ ವರೆಗೆ ನೀರಲ್ಲಿಯೇ ಇದ್ದು ಸಂಪೂರ್ಣ ನಾಲ್ಕು ದಿವಸಗಳ ವರೆಗೆ ಈಜಿ ಜಗತ್ತಿನ ರಿಕಾರ್ಡು ಮುರಿಯಬೇಕೆಂದು ಆಶಿಸಿದ್ದರು. ಮತ್ತು ಆ ಶಕ್ತಿಯು ಅವರಲ್ಲಿದೆಯೆಂಬ ಭರವಸೆಯು ಇದೆ. ಸಾವಿರಾರು ಜನರು ನೋಡಲು ನೆರೆಯುತ್ತಿದ್ದರು. ಶ್ರೀ. ಚತರ್ಜಿಯವರು ದಣಿದಂತೆ ತೋರಿದರೂ, ತನ್ನ ಮಹತ್ವಾಕಾಂಕ್ಷೆಯನ್ನು ಈಡೇರಿಸುವ ಧೈರ್ಯದಲ್ಲಿದ್ದರು

—೦೦೦—

ಪ್ರಾಣಿಗಳ ಬಲಿಗಾಗಿ ತನ್ನ ಪ್ರಾಣವನ್ನೇ ಬಲಿ!

ಕಲ್ಕತ್ತೆಯ ಕಾಳಿಘಾಟ್ ದೇವಾಲಯದಲ್ಲಿ ನಡೆಯುವ ಅನೂಸುಷಿಕವಾದ ಪ್ರಾಣಿ ಬಲಿಯನ್ನು ನಿಲ್ಲಿಸಲು ಪಂಡಿತ ರಾಮಚಂದ್ರ ಶರ್ಮರವರು ಮರಣಾಂತಿಕ ಉಪವಾಸ ದೀಕ್ಷೆಯನ್ನು ಕೈಕೊಂಡು ಈಗಾಗಲೇ ಇಪ್ಪತ್ತು ದಿನಗಳ ಮೇಲ್ಪಟ್ಟಾಯಿತು. ಪಂಡಿತರ ದೇಹವು ಕೃಶವಾಗುತ್ತಲಿದ್ದರೂ ಸಂಕಲ್ಪವು ದ್ವಿಗುಣ ದೃಢವಾಗುತ್ತಲಿದೆ. ಇವರ ಸಂಕಲ್ಪಕ್ಕೆ ಕಲ್ಕತ್ತೆಯ ಮೂರವಾಡಿಗಳು ಸಹಾನುಭೂತಿಯನ್ನು ವ್ಯಕ್ತಗೊಳಿಸಿ ದೇವಾಲಯವನ್ನೇ ಬಹಿಷ್ಕರಿಸುವೆವೆಂದಿದ್ದಾರೆ.

'ಪ್ರಾಣಿಗಳ ರಕ್ತದಿಂದ ತೃಪ್ತಗಳಾಗದ ದೇವಿಯು ನನ್ನ ರಕ್ತದಿಂದಾದರೂ ತೃಪ್ತಳಾಗಲಿ' ಎಂದು ಶರ್ಮರು ನುಡಿಯುತ್ತಾರೆ

'ಈ ಪ್ರಾಣಿ ಬಲಿಯ ಕಾರಣದಿಂದಲೇ ನನ್ನ ಭಾರತವನ್ನು, 'ಮಿಸ್ ಮೇಯೋರವರು ಅವರ ಮದರ್ ಇಂಡಿಯಾ' ಗ್ರಂಥದಲ್ಲೂ, ಹೋಲಿವುಡ್ ಚಲನ ಚಿತ್ರದ ವರೂ, ಅನಾಗರೀಕ ದೇಶವೆಂದು ವರ್ಣಿಸಿರುವದರಿಂದ ಒಡನೆ ಶಾಸನ ರೂಪದಲ್ಲಿ ಈ ಕೈಂಕರ್ಯವನ್ನು ನಿಲ್ಲಿಸಿ ಭಾರತದ ಕೀರ್ತಿಯನ್ನುಳಿಸದೇಕೆಂದು ಡಾ. ಮೂಞ್ಜೆ ಅಂಕ್ಲೆಸೇರಿಯಾ ಎಂಬವರು ವೈಸರಾಯರಿಗೆ ತಂತೀ ಮೂಲಕ ವಿನಂತಿ ಮಾಡಿರುವರು.

—೦೦೦—

ಇಟಲಿ—ಅಬಿಸೀನಿಯಾ.

ಪಂಚರು ತೀರ್ಮಾನವನ್ನೊಪ್ಪಿಸಿದರು.

ಇಟಲಿ—ಅಬಿಸೀನಿಯಾ ಸಮಸ್ಯೆಗಳನ್ನು ಪರಿಶೀಲಿಸಿ ಸಮರ್ಪಕವಾದ ಒಂದು ರಾಜೀ ತೀರ್ಮಾನವನ್ನು ಮಾಡಲು ರಾಷ್ಟ್ರ ಸಂಘದವರು ಐದು ಮಂದಿಯ ಒಂದು ಸಮಿತಿಯನ್ನು ಏರ್ಪಡಿಸಿದ್ದರಷ್ಟೆ. ಆ ಪಂಚರು ದೀರ್ಘ ಚರ್ಚೆ ನಡೆಸಿ ತಮ್ಮ ವರದಿಗಳನ್ನು ಇವೆಡು ರಾಷ್ಟ್ರಗಳ ಮಂಜೂರಾತಿಗಾಗಿ ಕಳುಹಿಸಿರುವರು. ವಂದಿಯ ಶರತ್ತುಗಳೇನೆಂಬದು ಇನ್ನೂ ಹೊರಬಿದ್ದಿರುವದಿಲ್ಲ. ಆದರೆ ಶಾಂತಿ ಸ್ಥಾಪನೆಗಾಗಿ ಬ್ರಿಟಿಷ್ ಮತ್ತು ಫ್ರಾನ್ಸ್ ದೇಶಗಳು ತಮ್ಮ ಪ್ರಸಾಹತುಗಳ ಖಂಡೂಂದು ಭಾಗಗಳನ್ನೂ ಅಬಿಸೀನಿಯಾಕ್ಕೆ ಬಿಟ್ಟು ಕೊಡುವಾತೆಯೂ, ಇದಕ್ಕೆ ಬದಲಾಗಿ ಅಬಿಸೀನಿಯಾವು ತನ್ನ ಎಲ್ಲೆಕಟ್ಟಿನಲ್ಲಿರುವ ಕೆಲವು ಪ್ರಾಂತ್ಯಗಳನ್ನು ಇಟಲಿಗೆ ಬಿಟ್ಟು ಕೊಡಬೇಕೆಂಬುದಾಗಿಯೂ ತೀರ್ಮಾನಗಳಿವೆಯೆಂದು ಊಹಿಸಲಾಗಿದೆ.

ಅಬಿಸೀನಿಯಾವು ತೀರ್ಮಾನಕ್ಕೆ ಒಪ್ಪುತ್ತಿಲ್ಲ.

ಅಬಿಸೀನಿಯಾ ಚಕ್ರವರ್ತಿಯವರು ತಮ್ಮ ಮಂತ್ರಾಲೋಚನಾಸಭೆಯಲ್ಲಿ ಒಂದುದಿನವೆಲ್ಲ ಈ ತೀರ್ಮಾನಗಳ ಪರಿಶೀಲನೆಯಲ್ಲಿ ಕಳೆದು ಕಡೆಗೆ ತೀರ್ಮಾನಕ್ಕೆ ಸಮ್ಮತಿಯನ್ನಿತ್ತಿರುವರು. ಕೆಲ ಆರ್ಥಿಕ ವಿಚಾರದಲ್ಲಿ ಇಟಲಿಯವರಿಗೆ ಕೊಡಲ್ಪಟ್ಟಿರುವ ಹೆಚ್ಚಿನ ಸೌಲಭ್ಯಗಳು ಅಬಿಸೀನಿಯಾಕ್ಕೆ ಬಾಧಕವಿದ್ದರೂ ಶಾಂತಿ ಪಾಲನೆಯ ದೃಷ್ಟಿಯಿಂದ ತೀರ್ಮಾನಕ್ಕೆ ಸಮ್ಮತಿಸಿರುತ್ತೇನೆ' ಎಂದು ಅಬಿಸೀನಿಯಾದ ಚಕ್ರವರ್ತಿಗಳು ನುಡಿದಿರುವರು.

ಇಟಲಿಯ ತಿರಸ್ಕಾರ.

ಇಟಲಿಯ ಮಂತ್ರಿಮಂಡಲವು ಮುಸೋಲೀನಿಯವರ ಅಧ್ಯಕ್ಷತೆಯಲ್ಲಿ ಸೇರಿ ಪಂಚರ ತೀರ್ಮಾನವು ಅಸಮರ್ಪಕವೆಂದೂ, ಅದನ್ನು ಇಟಲಿಯು ಸ್ವೀಕರಿಸುವದಿಲ್ಲವೆಂದೂ ಪ್ರಕಟಿಸಿರುವದು. ಆದರೆ ಇಟಲಿಯ ಹಕ್ಕು ಭಾಧ್ಯತೆಗಳಿಗೆ ಇನ್ನು ಹೆಚ್ಚಿನ ಭದ್ರತೆಗಳಿಂದ ಹೊಸ ಒಪ್ಪಂದಕ್ಕೆ ಇಟಲಿಯು ಒಪ್ಪಲು ಸಿದ್ಧವಿದೆಯೆಂದೂ ತಿಳಿಯಲಾಗಿದೆ.

ಇಟಲಿಗೆ ಈಗ ದೊರೆತಿರುವ ಪ್ರಾಂತ್ಯಗಳು ಸಾಲದೆಂದೂ, ಎರಿಟ್ರಿಯಾ ಮತ್ತು ಇಟಲಿಯನ್ ಸೋವೂಲಿಲೇಂಡನ್ನು ಜೋಡಿಸುವಷ್ಟು ಪ್ರದೇಶಗಳು ಇಟಲಿಗೆ ಸಿಕ್ಕಬೇಕೆಂದೂ, ಅಬಿಸೀನಿಯಾಕ್ಕೆ ಕೊಡಲಾಗುವ ಬಂದರಿಕ್ಕೆ ಹೋಗುವ ಮಾರ್ಗವು ಇಟಲಿಯು ಎರಿಟ್ರಿಯಾದ ಮಧ್ಯಕ್ಕಾಗಿರಬೇಕೆಂದೂ ಹೊಸ ಶರತ್ತುಗಳನ್ನು ಇಟಲಿಯು ಕೇಳುತ್ತಿದೆಯೆಂದು ಇಂಗ್ಲೆಂಡಿನ 'ಡೈಲಿ ಟೆಲಿಗ್ರಾಫ್' ಪತ್ರಿಕೆಯು ಪ್ರಕಟಿಸಿದೆ.

ತಿರಸ್ಕಾರದಿಂದ ಅಬಿಸೀನಿಯರು ಖೇದಗೊಂಡಿರುವರು.

ಇಟಲಿಯು ರಾಜೀ ತೀರ್ಮಾನಗಳನ್ನು ತಿರಸ್ಕರಿಸಿದೆಂಬ ವರ್ತಮಾನದಿಂದ ಅಬಿಸೀನಿಯಾವು ಹೆಚ್ಚು ಖೇದಗೊಂಡಿರುವದು. ಯುದ್ಧಕ್ಕಾಗಿ, ಸಾರ್ವತ್ರಿಕ ಸೈನ್ಯ ಸೇರಿಸುವ ಕಟ್ಟಪ್ಪಣೆಗಳನ್ನು ಸಾರ್ವಭೌಮರು ಕೂಡಲೇ ಹೊರಡಿಸಬೇಕೆಂದು ಹಲವರು ಸೂಚಿಸಿರುವರು.

ಫ್ರಾನ್ಸ್ ಜರ್ಮನಿಗಳಿಗೆ ವಿಸ್ಮಯ.

ಪಂಚರ ತೀರ್ಮಾನವು ಇಟಲಿಯಿಂದಲೂ ಸ್ವೀಕೃತವಾಗುವದೆಂಬ ಭರವಸೆಯಲ್ಲಿದ್ದ ಅನೇಕ ರಾಷ್ಟ್ರಗಳು ಈಗ ಇಟಲಿಯ ತಿರಸ್ಕಾರದಿಂದ ವಿಸ್ಮಯಗೊಂಡಿವೆ. ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಈ ಧೋರಣೆಯು ಅಧಿಕ ವಿಸ್ಮಯವನ್ನುಂಟುಮಾಡಿದೆ. ಇಂಗ್ಲೆಂಡಿನಲ್ಲಿ ವಿಸ್ಮಯವುಂಟಾದರೂ ಅನೇಕರು, ಇಟಲಿಯು ಇನ್ನೂ ತೀರ್ಮಾನಕ್ಕೆ ಒಪ್ಪುವದೆಂಬ ವಿಚಾರದಿಂದ ನಿರಾಶೆರಾಗಿಲ್ಲ.

ಅಬಿಸೀನಿಯಾವು ಯುದ್ಧಕ್ಕೆ ಸಿದ್ಧ.

ಟರ್ಕಿಯ ಸೇನಾನಾಯಕನಾದ ಜನರಲ್ ವಾಷಿದ್ ಪಾಷಾರವರೇ ಇಂದಿನ ಅಬಿಸೀನಿಯಾದ ಸೇನಾಧಿಪತಿ. ಇವರ ನೇತೃತ್ವದಲ್ಲಿ ಅನೇಕ ಬಂದೋಬಸ್ತುಗಳು ನಡೆಯುತ್ತಲಿವೆ. ಎಲ್ಲೆಕಟ್ಟುಗಳಲ್ಲಿ ಸಾವಿರ ಗಟ್ಟಿ ಸೈನಿಕರು ಇಟಲಿಯವರ ಧಾಳಿಯನ್ನು ನಿರೀಕ್ಷಿಸುತ್ತಲಿರುವರು, ಅನೇಕ ಕೋಟೆಗಳನ್ನು ಸುರಂಗಗಳನ್ನು ನಿರ್ಮಿಸಿರುವರು. ಸ್ತ್ರೀಯರ ಉತ್ಸೇಜನವು ಅಪಾರ ನೀಯವಾಗಿದೆ. ಸ್ತ್ರೀಯರೇ ಸೇನಾಧಿಕಾರಿಗಳಾಗಿ ಸೈನ್ಯಗಳನ್ನು ಸೇರಿಸುತ್ತಲಿರುವರು.

ಇಟಲಿಯ ಯುದ್ಧ ಸನ್ನಾಹ.

ಈ ವಾರ ಇಟಲಿಯಿಂದ ಅಬಿಸೀನಿಯಾದ ಎಲ್ಲೆಕಟ್ಟಿನಲ್ಲಿರುವ ಇಟಲಿಯ ಪ್ರಾಂತ್ಯಗಳಿಗೆ 6,000 ಸೈನಿಕರನ್ನೂ, ಏಷ್ಕೋಲಾರಿ, ಹೇಸರಕತ್ತೆ ಮತ್ತು ಇತರ ಯುದ್ಧೋಪಕರಣಗಳನ್ನೂ 5 ದೊಡ್ಡ ಯುದ್ಧನಾವೆಗಳಲ್ಲಿ ಸಾಗಿಸಿದರು. 3000 ಸೈನಿಕರು ಶ್ರೀಘ್ರದಲ್ಲಿ ಇಟಲಿಯಿಂದ ತೆರಳಲಿರುವರು. ಯುದ್ಧವಾದಲ್ಲಿ ಇಟಲಿಯ ಸೇವಲ್ಲಾ, ಪಾಲೆರ್ಮೋ, ಮೆಸ್ಸಿನ, ಬಾರಿ ಮೊದಲಾದ ಪ್ರದೇಶಗಳು ಯುದ್ಧ ಕ್ಷೇತ್ರಗಳಾಗಿ ನಿರ್ಧರಿಸಲಾಗುವದೆಂದು ಅಲ್ಲಿನ ನಿವಾಸಿಗಳಿಗೆ ಎಚ್ಚರಿಕೆಗಳನ್ನು ಕೊಟ್ಟಿರುವರು.

ಇಟ್ಟಲಿಯ ಖರ್ಚು—ಅಬಿಸೀನಿಯಾದ ತಯಾರಿ.

ಇಟಲಿಗೆ ಅಬಿಸೀನಿಯಾದ ಎಲ್ಲೆಕಟ್ಟಿನಲ್ಲಿರುವ ತನ್ನ ಪ್ರಾಂತಗಳಿಗೆ ಸೈನ್ಯ ಕಳುಹಿಸಲು ಪ್ರತ್ಯೇಕ ಯುದ್ಧ ಸನ್ನಾಹಗಳನ್ನು ಮಾಡಲು ಇಂದಿನ ವರೆಗೆ 2500 ಮಿಲ್ಲಿಯನ್ ಲಯರ್ (ಇಟಲಿ ನಾಣ್ಯ) ವೆಚ್ಚವಾಗಿದೆ. ಇನ್ನೂ 12 ಮಿಲಿಯ ಹೆಚ್ಚಿನ ಖರ್ಚಿದೆಯಂತೆ ಇದಿರಿಂದ ಇಟಲಿಯ ಆರ್ಥಿಕ ಸ್ಥಿತಿಯು ಬಹಳ ಶೋಚನೀಯಾವಸ್ಥೆಯಲ್ಲಿದೆ ಬರುವ ಒಡೆಬ್ಟನಲ್ಲಿ ಇದನ್ನು ಸರಿಪಡಿಸುವದು ಕಷ್ಟ ಸಾಧ್ಯವಾಗಿದೆ.

ಅಬಿಸೀನಿಯಾದಲ್ಲಿ ಈಗ 1 ಮಿಲ್ಲಿಯಕ್ಕಿಂತ ಹೆಚ್ಚು ಸುಸಜ್ಜಿತ ಸೈನಿಕರಿರುವರು ಇನ್ನು 500,000 ಸೈನಿಕರನ್ನು ಸೇರಿಸಲ್ಪಡುವರು ಇದಕ್ಕಾಗಿ ಜೈಲಿನಿಂದ ಕೂಲೆಗಾರರನ್ನಲ್ಲದೆ ಇತರ ಕೈದಿಗಳನ್ನೆಲ್ಲ ಸೈನ್ಯಕ್ಕೆ ಸೇರಿಸಬೇಕೆಂಬ ನಿರ್ಧಾರವು ಆಗಿದೆಯಂತೆ.

———

ದೇಶೀಯ ವಾಚನಾಲಯದ ಅವಶ್ಯಕತೆ.

(ಲೇಖಕರು:—ಡಾ. ಎಸ್. ಎಸ್. ಹರ್ಡೀಕರ್. ಹುಬ್ಬಳ್ಳಿ.)

'ನಮ್ಮದೀ, ನಮ್ಮದೀ ಭರತ ವರ್ಷ' ಎಂಬ ಹಿಂದೀ ಸ್ವದೇಶೀತ್ವವನ್ನು ಬಿರುಸಾಗಿ ಬಿತ್ತಿ ಹುಲುಸಾಗಿ ಬೆಳಿಸಿದ ಲೋಕಮಾನ್ಯ ತಿಲಕರ ಜ್ಞಾಪಕಾರ್ಥವಾಗಿ ತಿಲಕ ಗ್ರಂಥ ಸಂಗ್ರಹವು ಹುಬ್ಬಳ್ಳಿಯಲ್ಲಿ 1922 ನೇ ಆಗಸ್ಟ್ 1ರಲ್ಲಿ ಸ್ಥಾಪಿಸಲಾಯಿತು. ಇದನ್ನು ಕರ್ನಾಟಕದಲ್ಲೆಲ್ಲಾ ಅತ್ಯುತ್ತಮವಾದ ಗ್ರಂಥ ಭಂಡಾರವನ್ನಾಗಿ ಮಾಡಬೇಕೆಂದು ಸ್ಥಾಪಕರ ಆಶಯವಿತ್ತು.

ಪುಸ್ತಕ ಭಂಡಾರಗಳೇ ನಿಜವಾದ ಪಾಠಶಾಲೆಗಳು ಸಾಮಾನ್ಯ ಜನರಲ್ಲಿ ಅವು ಕಲಿಯುವ ಅಭ್ಯಾಸವನ್ನು ಹುಟ್ಟಿಸುತ್ತವೆ. ಹೊಸ ಹೊಸ ವಿಚಾರಗಳನ್ನು ಹೊಸ ಹೊಸ ಅನುಭವ ದೃಷ್ಟಿಪಥಗಳಿಂದ ನೋಡಲು ತಿಳಿಸುತ್ತವೆ. ಪಾಶ್ಚಿಮಾತ್ಯರಲ್ಲಿ ಮನೆಗೊಂದು ಲೈಬ್ರೆರಿಯಿರಬೇಕೆಂದು ಅವರು ಆಶಿಸುವಂತೆ ಸದ್ಯದಲ್ಲಿ ನಾವು ಆಶಿಸುವ ಹಾಗಿಲ್ಲ. ಇಂಡಿಯದಂತಹ ಬಡದೇಶದಲ್ಲಿ ಸಾಮಾನ್ಯ ಜನರು ಪುಸ್ತಕಗಳನ್ನು ಸಂಗ್ರಹಿಸಬೇಕೆಂದರೆ ಸಾಧ್ಯವಲ್ಲ. ಸಾರ್ವಜನಿಕ ಸಂಗ್ರಹಾಲಯಗಳೂ, ಧರ್ಮಾರ್ಥ ವಾಚನಾಲಯಗಳೂ ಈಗ ಓದುವವರಿಗೆ ಅವಶ್ಯಕವಾಗಿವೆ. ಅಜ್ಞಾನದ ಅಧಿಪತಿಯಾಗಿರುವದಕ್ಕಿಂತಲೂ ಸುಜ್ಞಾನದ ಭಿಕ್ಷುಕನಾಗಿರುವದು ಲೇಸೆಂದು ಹೇಳಿದ ಒಬ್ಬ ಘನ್ಯಕ್ಕೆಯಂತೆ ನಾವೂ ಜ್ಞಾನ ವೈಶಾಲ್ಯಕ್ಕೆ ಯತ್ನಿಸಬೇಕು. ಈ ವಿಶಾಲತೆಯೇ ನಮ್ಮನ್ನು ಜೀವನದ ಬೇಜಾರಿನಿಂದ ಪಾರುಮಾಡುವದು. ಇತರರು ವಿಕಾಸ ಹೊಂದಿದ ವರ್ಗಗಳನ್ನು ನೋಡಿ, ನಮ್ಮ ವಿಕಾಸಕ್ಕೆ ತಕ್ಕ ಹಾದಿಯನ್ನು ನಾವು ಹಾಕಿಕೊಳ್ಳಬಹುದು.

ಲೋಕಮಾನ್ಯರು ತಮ್ಮ ಧ್ಯೇಯ ಸಾಧನೆಯನ್ನು ವಿದ್ಯಾಶಾಲೆಯಲ್ಲಿಯೇ ಆರಂಭಿಸಿದರು. ಸಾರ್ವಜನಿಕರಲ್ಲಿ ದೇಶೀತ್ವವನ್ನು ವೃದ್ಧಿಮಾಡಬೇಕಾದರೆ ನಮ್ಮ ದೇಶಕ್ಕೆ ತಕ್ಕಂತೆ ಶಿಕ್ಷಣವಿರಬೇಕೆಂದು ಅವರು ನಂಬಿದ್ದರು ಹಾಗೆಯೇ ದುಡಿಯುತ್ತಲೂ ಇದ್ದರು. ಅಂಥವರ ಜ್ಞಾಪಕವನ್ನು ಮರುದಿನದ ಸಂತತಿಯಲ್ಲಿ ಮೂಡಿಸಬೇಕಾದರೆ ಸಾರ್ವಜನಿಕ ಶಿಕ್ಷಣೋಪಾಯವಾದ ಗ್ರಂಥ ಭಂಡಾರಕ್ಕಿಂತಲೂ ಉತ್ತಮವಾದ್ದಾವದು?

ಈ ಮತದಿಂದ ಸ್ಫೂರ್ತಿಗೊಂಡು ನಾನು ಹಲವರು ಸ್ನೇಹಿತರೊಡನೆ ವಿಷಯವನ್ನು ಚರ್ಚಿಸಿದೆ. ಅವರೂ ನನ್ನೊಡನೆ ಸಹಕರಿಸಿದರು. ಅಂದಿನಿಂದ ತಿಲಕ ಗ್ರಂಥ ಸಂಗ್ರಹಕ್ಕೆ ಪುಸ್ತಕಗಳನ್ನು ಜೋಡಿಸುವುದು ಆರಂಭವಾಯಿತು. ಇಂಗ್ಲೆಂಡ್, ಅಮೇರಿಕಗಳಿಂದ ನಾನು ತಂದ ಪುಸ್ತಕಗಳೂ ಹುಬ್ಬಳ್ಳಿಯ ಸೆವೆಯವರ ಹೋಮ್ ಲೈಬ್ರೆರಿಯ ಪುಸ್ತಕಗಳೂ ಈ ಸಂಗ್ರಹಾಲಯದ ಪ್ರಥಮ ಗ್ರಂಥಗಳಾದುವು ನಾನು ರಾಜಕೀಯ ಪ್ರಚಾರಕ್ಕೆ ಹೋದಾಗಲೆಲ್ಲ ನನ್ನ ಸ್ನೇಹಿತರನ್ನೂ, ಹಿತೈಷಿಗಳನ್ನೂ ಯಾಚಿಸಿ ಪುಸ್ತಕಗಳನ್ನ ತಂದೆ. ಲೇಖಕರನ್ನೂ, ಪ್ರಕಾಶಕರನ್ನೂ ತಿಲಕ ಗ್ರಂಥ ಸಂಗ್ರಹಕ್ಕೆ ಪುಸ್ತಕಗಳನ್ನು ದಾನಮಾಡಿರೆಂದು ಬೇಡಿದೆ. ಲಂಡನ್ನಿನ ಲೇಬರ್ ಪಬ್ಲಿಷಿಂಗ್ ಕಂಪೆನಿಯ ಪುಸ್ತಕಗಳು ರಿಯಾಯತಿಯಾಗಿ ಬಂದುವು. ಕೆಲವು ಅಮೇರಿಕದ ಕಂಪನಿಗಳು ಕೂಡ ತಮ್ಮ ಗ್ರಂಥಗಳನ್ನು ಕಮ್ಮಿಯ ಬೆಲೆಗೆ ಒದಗಿಸಿದವು. ಎನ್‌ಸೈಕ್ಲೋಪೀಡಿಯಾ ಮೊದಲಾದ ಜ್ಞಾನಕೋಶಗಳನ್ನು ಪ್ರಕಾಶಕರು ಬರೇ ನಾಮಕಾವಸ್ಥೆಯ ಬೆಲೆಗೆ ದಯಪಾಲಿಸಿದರು. ಹೀಗೆ ಕುರ್ಚಿ, ಬೆಂಚು, ಅಲ್ಮೆರಾ ಮೊದಲಾದ ಸಾಮಾನುಗಳನ್ನು ಕೊಟ್ಟ ಸ್ನೇಹಿತರಷ್ಟೇ ಅಲ್ಲದೆ, ಅಂತೂ ಹತ್ತು ಜನರು ಕೈಸೇರಿಸಿ ಈ ತಿಲಕ ಸಂಗ್ರಹವನ್ನು ಬೆಳಿಕಿಗೆ ತಂದರು. ಸಂಗ್ರಹವು ಈ ರೀತಿ ಅಭಿವೃದ್ಧಿಯಾಗುತ್ತಿರುವಾಗ ಅದರಲ್ಲಿ ೮ ಸಾವಿರ ಪೈಲ್ವಲ್ಪು ಪುಸ್ತಕಗಳಿದ್ದವು ಅವುಗಳ ಬೆಲೆಯು 14,000 ರೂಪಾಯಿಗಳಿಗೆ ಏರಿತ್ತು.

ಆದರೇನು? ಈ ಸಂಗ್ರಹದ ಮೇಲೆ ಅಧಿಕಾರ ವರ್ಗದ ಕ್ರೂರ ದೃಷ್ಟಿ ಬಿತ್ತು. ರಾಜಕೀಯ ಪ್ರಚಾರಕನು ಸಂಗ್ರಹವನ್ನು ಜೋಡಿಸಿದ್ದೇ ಈ ಪುಸ್ತಕಭಂಡಾರದ ತಪ್ಪಾಯಿತು. ಸರಕಾರದವರು ಕಾಂಗ್ರೆಸ್ಸನ್ನು ನ್ಯಾಯವಿರುದ್ಧವೆಂದು 1930, 1932 ರಲ್ಲಿ ಮೂಡಿದ ದಬ್ಬಾಳಿಕೆ ಕಾನೂನುಗಳು ಸಂಗ್ರಹವನ್ನು ಸಹ ವಶಪಡಿಸಿಕೊಂಡವು. 1931 ರಲ್ಲಿ ಗಾಂಧಿ-ಇರ್ವಿನ್ ಒಪ್ಪಂದವಾದಾಗ ಸಂಗ್ರಹಕ್ಕೆ ಇನ್ನು ಮುಂದೆ ಅಪತ್ತು ಬರಕೂಡದೆಂದು ಹುಬ್ಬಳ್ಳಿಯ ವಕೀಲ ಶ್ರೀಯುತ ಬಿ. ಕಬ್ಬೂರರೇ ಮೊದಲಾದ 9 ಜನರು ಕೂಡಿದ ಟ್ರಸ್ಟಿಯೊಂದನ್ನು ನಿರ್ಮಿಸಿ ಅದರ ದಸ್ತಾವೇಜನ್ನು ಸರಕಾರದಲ್ಲಿ ರಿಜಿಸ್ಟರಿಮಾಡಿ ಸಾರ್ವಜನಿಕಕ್ಕೆ ಬಿಟ್ಟುಕೊಡಲಾಯಿತು.

ಇಷ್ಟಾದರೂ ಪ್ರಭುತ್ವದ ದುರುದ್ದೇಶ ಹೋಗಲಿಲ್ಲ. 1932ರಲ್ಲಿ ಸಂಗ್ರಹವು ಅನ್ಯಾಯವೆಂದಾದಾಗ ತಗಲಿತು ಅದಕ್ಕೆ ಮಹಾ ಮೊರೆ. ಸರಕಾರದ ಹಿಡಿಯಲ್ಲಿ ಅದು ಹಿಸಿಕೆ ಹೋಯಿತು. ಮೂರಲ್ಪಟ್ಟ ಉದ್ಗ್ರಂಥಗಳೆಷ್ಟೋ, ವಿಲಂಗಳು ಹಾಕಿದವೆಷ್ಟೋ, ಬೆಂಕಿಗೆ ಆಹುತಿಯೂದವೆಷ್ಟೋ! ಈಗಲೂ ಸಂಗ್ರಹದ ಅನೇಕ ಪುಸ್ತಕಗಳು ಹುಬ್ಬಳ್ಳಿಯ ಕೆಲವು ಮಹಾ ಜನರಲ್ಲಿಯೂ, ಶಿಕ್ಷಣಾಲಯಗಳಲ್ಲಿಯೂ ಇವೆಯೆಂದು ಕೇಳುತ್ತೇನೆ ಹೋಗಲಿ ಅದನ್ನು ಪತ್ತೆಮಾಡಲು ನನಗಿಷ್ಟವಿಲ್ಲ.

1934 ರಲ್ಲಿ ಸರಕಾರವು ಪುನಃ ಸಂಗ್ರಹವನ್ನು ಹಿಂದಿರುಗಿ ಕೊಟ್ಟಾಗ ನಮಗೆ ಸಿಕ್ಕಿದ್ದು ಮೂರೇ ಪೂತು. ತಿಲಕ ಗ್ರಂಥ ಸಂಗ್ರಹ.

ಸಂಗ್ರಹಾಲಯವು ಉಪಯೋಗದಲ್ಲಿದ್ದಾಗ ಅದಕ್ಕೆ ಲೋಕಮಾನ್ಯ ವಾಚನಾಲಯವು ಸಂಬಂಧಿಸಿತ್ತು. ಅದರಲ್ಲಿ ದೈನಿಕ, ಸಾಪ್ತಾಹಿಕ ಪತ್ರಿಕೆಗಳಲ್ಲದೆ ಜಗತ್ತಿನ ಮುಖ್ಯವಾದ ಮಾಸಿಕಗಳೂ ಸಾರ್ವಜನರ ಉಪಯೋಗಕ್ಕಿರುತ್ತಿದ್ದವು. ಇಂಗ್ಲಿಷ್, ಹಿಂದಿ, ಕನ್ನಡ, ಮರಾಠಿ—ಈ ನಾಲ್ಕು ಭಾಷೆಗಳಲ್ಲಿ ಪತ್ರಿಕೆಗಳಿರುತ್ತಿದ್ದವು. ದಿನಂಪ್ರತಿ ನೂರಾರು ಜನರು ಓದಿ ಹೋಗುತ್ತಿದ್ದರು.

ಇಂಥ ಸಾರ್ವಜನಿಕ ಸಂಗ್ರಹವನ್ನು ಅನ್ಯಾಯವಾಗಿಣಿಸಿ, ನಾಶಮಾಡಲು ಪ್ರಭುತ್ವಕ್ಕೆ ಕಾರಣವೇನಿದ್ದೀತು? ಅಲ್ಲಿ ಓದಲಿಕ್ಕೆ ರಾಜಕೀಯ ಸ್ವಯಂಸೇವಕರು ಬರುತ್ತಿದ್ದರೆಂದೇ? ಜನರು ಅದರಿಂದ ಪಾರಮಾರ್ಥಿಕ ಶಿಕ್ಷಣವನ್ನು ಪಡೆಯುತ್ತಿದ್ದರೆಂದೇ?

ಆಳುವರು ಈ ಕ್ರೂರತೆಯಿಂದ ನಾವು ಹಿಡಿದಿದ್ದ ಕಾರ್ಯದ ಸತ್ವವು ಎಂದೂ ಕಡಿಮೆಯಾಗಲಿಕ್ಕಿಲ್ಲ. ತಿಲಕ ಗ್ರಂಥ ಸಂಗ್ರಹದ ಅಗಿನ ಶೇಷದಿಂದ, ಅದರ ಭಸ್ಮದಿಂದ, ಅಧಿಕತರ ಸ್ಪೂರ್ತಿಯನ್ನು ಹೊಡೆದೋಡಿಸಿ ಜ್ಞಾನ ಜ್ಯೋತಿಯನ್ನು ಎತ್ತಿಹಿಡಿಯುವ ಇನ್ನೂ ತೇಜೋಮಯ ಸಂಸ್ಥೆಯು ಹುಟ್ಟುತ್ತದೆ.

ಕೋಳಿಪೊಟ್ಟೆ ಮತ್ತು ಹಳ್ಳಿಗಳ ಉದ್ಧಾರ.

(ಲೇಖಾಂಕ ೩)

(ಲೇಖಕರು:—ಪಂಡಿತ ಕಾರಾನಾಥರು, ತುಂಗಭದ್ರ.)

ಪೊಟ್ಟೆಯಲ್ಲಿ ಶಕ್ತಿವರ್ಧಕ ಭಾಗವೆಷ್ಟಿದೆ ಎಂಬದನ್ನು ಇತರ ಆಹಾರಾಂಗಳೊಡನೆ ಸಮತೂಗಿಸಿ ಹಿಂದಿನ ಬರಹದಲ್ಲಿ ತೋರಿಸಿದ್ದಾಯಿತು. ಅದರೆ ಅದು ಸಸ್ಯವರ್ಗಕ್ಕೆ ಅಲ್ಲದೇ ಪ್ರಾಣಿವರ್ಗಕ್ಕೆ ಸೇರಿದ ಆಹಾರವಲ್ಲವೇ? ಎಂದು ಸಸ್ಯಾಹಾರಿಗಳು (Vegetarians) ಪ್ರಶ್ನಿಸಬಹುದು, ಆದರೆ ಒಂದು ಮೊತ್ತ ಅವರೂ ಹಾಲು, ಮೊಸರು, ಮಜ್ಜಿಗೆ, ತಪ್ಪ ಉಣ್ಣುವವರಲ್ಲವೇ? ಇವೂ ಪ್ರಾಣಿಗಳಿಂದ ಅಲ್ಲವೇ ಉಂಟಾಗುವದು? ಹೀಗಿರುವಾಗ ಮೊಟ್ಟೆಗಳಿಗೂ ಇವುಗಳಿಗೂ ಭೇದವೇನು? ಎಂಡೂ ಸಸ್ಯಾಹಾರಿಗಳಲ್ಲವಷ್ಟೇ?

ಹಾಲು ಮೊಸರಿನಲ್ಲಿ ಹಿಂಸೆಯಿಲ್ಲ, ಮೊಟ್ಟೆಯನ್ನುಣ್ಣುವದರಲ್ಲಿ ಹಿಂಸೆ ಇದೆ-ಎಂದು ಅನೇಕರು ಅನ್ನುವದುಂಟು. ಇದೊಂದು ಅಂಧ ಪರಂಪರೆಯ ಮತ. ಅವರವರ ಸಂಬಿಕೆಯು ಅವರವರಿಗೆ ಪ್ರೀಯವಾಗಿರಬಹುದು ಅದು ಸಹಜವೇ. ಆದರೆ ನಾವಿಲ್ಲಿ ಹೊರಟಿರುವದು ವಿಷಮವನ್ನು ಆ ದೃಷ್ಟಿಯಿಂದ ನೋಡುವದಕ್ಕಲ್ಲ, ಸಕಾರಣವಾಗಿ ಸಶಾಸ್ತ್ರವಾಗಿ ಚರ್ಚಿಸುವದಕ್ಕೆ. ಈ ದೃಷ್ಟಿಯಿಂದ ನೋಡಿದರೆ ಹಾಲಿಗಾಗಿ ಎಮ್ಮೆ ದನಗಳಿಗೆ ಆಗುವ ಹಿಂಸೆ ಮೊಟ್ಟೆಗಳಿಗಾಗಿ ಕೋಳಿಗಳಿಗಾಗುವದಿಲ್ಲ. ಹಾಲು ಹಿಂಡ ಹೋದಾಗ ಹಾಲಿಳಿಯುವಂತೆ ಮೊದಲು ಕರು ಕೆಚ್ಚಲಿಗೆ ಬಾಯಿ ಹಾಕಬೇಕು. ಹಾಲಿಳಿದ ಗುರುತಾಯಿತೋ—ಪಾರು—ಆ ಕರುವಿನ ಬಾಯಿಗೆ ಸೊನ್ತಿಯೇ ಮತ್ತೆ ಇದರಲ್ಲಿ ಹಿಂಸೆ ಇಲ್ಲವೋ? ಮೊಲೆಗಳನ್ನೆಳೆಯುವದರಲ್ಲಿ ಹಿಂಡುವದರಲ್ಲಿ ತೊಂದರೆಯಿಲ್ಲವೋ? ಬರಬರುತ್ತಾ ಅವುಗಳ ಸ್ಪರ್ಶಜ್ಞಾನವು ಮೊದ್ದಾಗಿ ಅವುಗಳಿಗಷ್ಟು ನೋವಾಗುವದಿಲ್ಲ. ಚಳಿಗಾಲದಲ್ಲಿ ಮೊಲೆಗಳಿಗೆ ಆಗಾಗ್ಗೆ ತೊಂದರೆಯಾಗುವದನ್ನು ಎಷ್ಟೋ ಮಂದಿ ನೋಡುತ್ತಾರೆ. ಮುದ್ದಾಸ್ ಮತ್ತು ಕೆಲವು ಕಡೆ ಮನೆಯಿಂದ ಮನೆಗೆ ದನವನ್ನೊಯ್ದು ಬಾಗಿಲ ಮುಂದೆ ಬೇಕಾದಷ್ಟು ಹಾಲು ಹಿಂಡಿಕೊಡುವ ರೂಢಿ ಇದೆ. ಎಷ್ಟೋ ಮಂದಿ ಅಳಳು ಹಾಲಿಳಿಸುವದಿಲ್ಲವಾದರೆ ಮೆತ್ತಗೆ ಕೆಚ್ಚಲು ಗುದ್ದುವದೂ ಉಂಟು! ಕರು ಸತ್ತರೆ ಹುಲ್ಲು ತುಂಬಿಸಿ ಮುಂದಿರಿಸಿದ ನಿರ್ಜೀವ ಪ್ರತಿನಿಧಿ ಬೇರೆ! ಇದೆಲ್ಲ ಹಿಂಸೆಯಿಲ್ಲವೇ?

ಇಷ್ಟೇ ಅಲ್ಲ. ಅಕಳಿ ಕೊಟ್ಟಿಗೆಯ ಸ್ವಚ್ಛತೆಯ ದುರವಸ್ಥೆಯೇನು! ಅವುಗಳಿಗೆ ನೀರು ಕಾಳು ಇಡುವ ಪಾತ್ರೆಗಳ ಕೊಳೆಯೇನು? ಮೈಗೆ ಹತ್ತಿರುವ ತೊಟ್ಟಿಯ ಗತಿಯೇನು! ಅಭ್ಯಾಸ ಬಲದಿಂದ ಅಕಳಿಗೆ ಇವೆಲ್ಲ ಅಷ್ಟು ಅಪಾಯಕರವಾಗಿಲ್ಲದೇ ಹೋಗಿರಬಹುದು ನಮ್ಮ ಅಭ್ಯಾಸಕ್ಕ ಇವೆಲ್ಲ ಹೇಗೂ ತೋರಲಿ. ವಿಚಾರಕ್ಕೆ ಇವು ಹಿಂಸೆಯೆಂದೇ ತೋರುವತಿಲ್ಲವೇ?

ಇವನ್ನೆಲ್ಲ ಸುಧಾರಿಸಲಿಕ್ಕಾಗುವದಿಲ್ಲ ಎಂದು ಹೇಳಲಿಕ್ಕಾಗದು ಆದರೆ ಅಷ್ಟು ಸುಧಾರಿಸಿದ ಮೇಲಕ್ಕೂ ಆಗಬಹುದಾದ ಹಿಂಸೆಗಳಲ್ಲಿ ಅರ್ಧಾಂಶವಾದರೂ ಕೋಳಿಗಳಿಗೆ ಆಗುವ ಸಂಭವವಿಲ್ಲ. ಅವುಗಳ ಕೊಂಡು ತಿನ್ನಿಸುವುಗಳ ವ್ಯವಸ್ಥೆಯಲ್ಲಿಯೇ ಆಗಲಿ, ಅವುಗಳ ನಿವಾಸಸ್ಥಾನಗಳಲ್ಲಿಯೇ ಆಗಲಿ, ಅವುಗಳ ಮೊಟ್ಟೆಗಳನ್ನು ತೆಗೆದು ಉಪಯೋಗಿಸುವದರಿಂದಲೇ ಆಗಲಿ, ಅಂಥ ಯಾವೊಂದು ದುರವಸ್ಥೆಯೂ ಆಗದು. ಮೊಟ್ಟೆಯನ್ನು ತೆಗೆದ ಸ್ವಲ್ಪ ಹೊತ್ತಿಗೇ ಅದನ್ನಿಟ್ಟ ಕೋಳಿಯು ಆ ವಿಷಯವನ್ನೇ ಮರೆತು ಹೋಗುವದು. ಯಥಾಪ್ರಕಾರ ಹೊರಗೆ ಹೆಕ್ಕಿ ತಿನ್ನುತ್ತ ಮತ್ತೆ ಓಡಾಡುವದು.

ಹೀಗಿರುವಾಗ ಒಬದೊಂದೇ ಅಂಗವನ್ನು ಸೂಕ್ಷ್ಮವಿಸಿ ನೋಡಿದರೂ, ಹಿಂಸೆಯು ಹಾಲಿನ ಉಪಯೋಗದಲ್ಲಿಯೇ ಹೆಚ್ಚಾಗಿರುವದೆಂದು ತೋರುವದಿಲ್ಲವೇ? ಹಾಲನ್ನೇ ಬಿಡಬೇಕಾದು ಇದರ ಸಾರಾಂಶವಲ್ಲ. ಆದರೆ ಎರಡರ ಉಪಯೋಗದಿಂದಲಾಗುವ ಹಿಂಸೆಯನ್ನು ತಕ್ಕಡಿಗೇರಿಸಿ ತೋರಿಸಬೇಕೆಂಬುದೇ ಈ ಬರಹದ ಉದ್ದೇಶ.

ಈಗ ಈ ಮೊಟ್ಟೆಗಳಿಂದ ಆಗುವ ಆರ್ಥಿಕ ಲಾಭವನ್ನು ನೋಡೋಣ ಒಂದು ಹೆಣ್ಣು ಕೋಳಿಯನ್ನು ಚೆನ್ನಾಗಿ ಸಾಕಿಡುವದಾದರೆ ಅದಕ್ಕೆ ತಿಂಗಳಿಗೆ 4 ಆಣೆ ಮೊತ್ತ ಆಹಾರದ ಖರ್ಚು ಬೀಳುವದು ಮದ್ರಾಸ್ ಪ್ರಾಂತ್ಯದ ಸರಕಾರ. ಕೃಷಿಕರ್ಮದ ಶಾಖೆಯು ಹಕ್ಕಾರು ಕಡೆ ಮಾಡಿದ ಶೋಧನೆಯಿಟ್ಟ ಲೆಕ್ಕಾಚಾರ. ಇವುಗಳಿಂದ ತಿಂಗಳೊಂದಕ್ಕೆ ಹೊಟ್ಟೆ ಖರ್ಚಿನ ಸರಾಸರಿ ಇದು. ಮತ್ತು ಈ ಖರ್ಚು ಕೋಳಿಯನ್ನು ಉತ್ತಮ ಆದರ್ಶ ಸ್ಥಿತಿಯಲ್ಲಿಡುವದಾದರೆ ನೂತ್ಯ ನಮ್ಮ ಹಳ್ಳಿಯೂರುಗಳಲ್ಲಿ ಇಡುವ ರೀತಿಗೆ ಅನ್ವಯಿಸಬೇಡ.

ಹೊಲ, ಗದ್ದೆ, ಹಿತ್ತಲು, ತೋಟವನ್ನಿಟ್ಟುಕೊಳ್ಳುವವರಿಗೆ ಕೋಳಿಯಿಂದ ಒಹಳ ಲಾಭವುಂಟು. ಮನುಷ್ಯರ ಉಪಯೋಗಕ್ಕೆ ಬೀಳದ ಕಸ—ಕಸರು ಅವೆಷ್ಟೊ ತಿಂದು ಹಾಕುತ್ತವೆ. ಕೊಯಿಲು ತೀರಿದ ಮೇಲೆ ಹೊಲದಲ್ಲಿ ವ್ಯರ್ಥವಾಗಿ ಬಿದ್ದಿರುವ ಕಾಳಿಂದಲೂ ಕೋಳಿಗೆಷ್ಟೋ ಕಾಳು, ಹುಳ ಹೆಕ್ಕಿ ತಿನ್ನುತ್ತವೆ ಹೊಲಗದ್ದೆಗಳಲ್ಲಿ ನಮ್ಮ ಕಣ್ಣಿಗೆ ಕಂಡೇ ಬರದ ಎಷ್ಟೋ ಹುಳಹುಪ್ಪಡಿಗಳನ್ನು ಅವು ಕುಕ್ಕಿ ನುಂಗಿಬಿಡುತ್ತವೆ. ಇದರಿಂದ ಪೈರಿಗೆ ಅಪಾಯಕಾರಿಯಾದ ಜೀವಜಂತುಗಳು ನಾಶವಾಗಿ ರೈತನಿಗೆ ಲಾಭವಾಗುತ್ತದೆ. ಪೈರು ಒಂದಕ್ಕೆ ಬೆಳೆದ ಮೇಲೂ ಇವನ್ನು ಹೊಲಕ್ಕೆ ಬಿಟ್ಟು ಬಿಟ್ಟರೆ ಅಲ್ಲಿ ಆ ಪೈರಿಗೆ ಅಪಾಯವೊಡಬಹುದಾದ ಎಷ್ಟೋ ಹುಳ ನೊಣಗಳನ್ನು ಇವು ತಿಂದು ಹಾಕಿ ಬಿಡುತ್ತವೆ ಸಾರಾಂಶ—ರೈತನಲ್ಲಿ ಪೋಲು ವೆಚ್ಚವಾಗಿ ಹೋಗುವ ಎಷ್ಟೋ ಸದೆ—ಸಪಟೆ ಇವುಗಳಿಗೆ ಆಹಾರವಾಗಿ ಪರಿಣಮಿಸುತ್ತದೆ. ಆತನ ಪೈರಿಗೆ ಹಾನಿಯನ್ನುಂಟುಮಾಡುವ ಜೀವಿಗಳು ಇವುಗಳ ಕುಕ್ಕಿಗೆ ಆಹುತಿಯಾಗಿ ಪೈರಿನ ಉದ್ಧಾರವಾಗುತ್ತದೆ.

ಹೀಗೆಲ್ಲ ಇರುವಾಗ, ಕೋಳಿ ಒಂದಕ್ಕೆ ತಿಂಗಳಿಗೆ 5 ಆಣೆಗಿಂತ ಹೆಚ್ಚಿನ ಖರ್ಚಾಗುವದು ಅಸಂಭವವೇ ಆದರೆ ಖರ್ಚು 5 ಆಣೆಯೊದರೆ ಅದೇ ತಿಂಗಳೊಂದಕ್ಕೆ 11 ಆಣೆಯ ಮೊಟ್ಟೆಗಳು ಸಿಕ್ಕುತ್ತವೆ. ಇದನ್ನು ಕುರಿತು ಮದ್ರಾಸ್ ಸರಕಾರದ ಕೋಳಿಗಳ ವ್ಯವಸಾಯದ ಶಾಖೆಗೆ ಪ್ರಮುಖರಾದ ಶ್ರೀಯುತ ಹೆಚ್. ನರಹರರಾವ್ ಇವರು ಹೀಗೆಂದು ಬರೆಯುತ್ತಾರೆ—ಮೂವತ್ತು ಕೋಳಿ ಇಟ್ಟುಕೊಂಡವನಿಗೆ ತಿಂಗಳಿಗೆ 11 ರೂಪಾಯಿ ಆದಾಯವಿದೆ ಸ್ವಲ್ಪವೇ ದುಡಿತದಿಂದ ವರ್ಷ ಒಂದಕ್ಕೆ 130 ರೂಪಾಯಿಗಳ ಉತ್ಪನ್ನವಾಯಿತು. ಬಡ ರೈತನಿಗೆ ಈ ಉತ್ಪನ್ನವು ಒಂದು ಇಡೀ ಪೈರು ಸುಗ್ಗಿಯ ಬೆಳೆಯುಳ್ಳದ್ದಾಗಿದೆಯೋ ಇಲ್ಲವೊ?' ಪ್ರತ್ಯಕ್ಷ ಅನುಭವದ ಮತ್ತು ಲೆಕ್ಕಾಚಾರದ ಮಾತುಗಳಿವು.

ಟಪ್ಪಣಿ—ವಿಶೇಷ ಮಾಹಿತಿ ಬೇಕಾದವರು ಮದ್ರಾಸ್ ಕೃಷಿಕರ್ಮದ ಇಲಾಖೆಯ ಗ್ರಾಮಸ್ಥರ ಪಂಚಾಂಗ ಓದಿ ನೋಡಿ. ಇದು ಇಂಗ್ಲೀಷು, ತೆಲಗು, ಕನ್ನಡ, ಮಲಿಯಾಳಿ ಭಾಷೆಗಳಲ್ಲಿಯೂ ಸಿಕ್ಕುತ್ತದೆ. ಈ ಎರಡುಮೂರು ಚಿಲ್ಲರೆ ಪುಸ್ತಕಗಳ ಪುಟವನ್ನು ಯಾವ ತಾಸೀಲದಾರ ಕಚೇರಿಯಿಂದಲೂ ಒಂದು ಆಣೆಗೆ ಪಡೆಯಬಹುದು; ಪೋಷ್ಟಿಗೆ ಪತ್ರಹಾಕಿಬೇಕಾದ ಮಾಹಿತಿಯನ್ನ ಸಂಪಾದಿಸಬಹುದು.

"Poultry farming in the East" by Mrs A. K Franks ಎಂಬ ಪುಸ್ತಕವು ಬಹು ಯೋಗ್ಯವಾಗಿದೆ. ಇದನ್ನು—The U. P. poultry Association I, Sultanpur Road, Lucknow—ಇವರು ಮಾರುತ್ತಾರೆ.

ಅತೀ ಸುಲಭ ದರದಲ್ಲಿ ನಿಮಗೆ ಉತ್ಕೃಷ್ಟವಾದ ಕೋವಿ ಮತ್ತು ತೋಟಾಗಳು.

ಗ್ಯಾರಂಟಿಯೂವ ಹೊಸ ಮೂಲುಗಳು.



ಬರಲಿಕ್ಕಿರುವ ಶಿಕಾರಿ ಸಮಯಕ್ಕಾಗಿ.

ASHOO TOSH DAW & CO.,

GUN MAKERS.

"DAW BUILDING" 184, DHARMTALA ST., CALCUTTA.

..ಒಮ್ಮೆ ವಿಚಾರಿಸಿ ನೋಡಿ..] [ಬಾದುಸಲ ಪರೀಕ್ಷೆಮಾಡಿ

—4] ನಿಮ್ಮ ಕಸ್ಟದ ಹಣವನ್ನು ವೃಥಾ ದುಂದು ಮಾಡಬೇಡಿ. ಕಾಸಿಗೆ ತಕ್ಕ ವೊಲನ್ನು ಪಡೆದುಕೊಳ್ಳಿ.

ಕೊಡಗು

ಸಪ್ಟಂಬರ್ ತಾ. ೨೭ ನೇ ಶುಕ್ರವಾರ ೧೯೩೫.

ಗಂಧದ ಸಂಬಂಧ ಇನ್ನೊಂದು ನಿರ್ಬಂಧ.

ಇಷ್ಟರ ವರೆಗೆ ರೈತರ ಅನ್‌ರಿಡೀಮ್ಡ್ ಜಾಗದಿಂದ ಕಿತ್ತುಕೊಂಡು ಹೋಗುತ್ತಿದ್ದ ಗಂಧದ ಮರಗಳಿಗೆ ಸರ್ಕಾರದವರು ಏನೊಂದೂ ಪ್ರತಿಫಲ ಜಾಗದ ವಾಲೀಕರಿಗೆ ಕೊಡದೆ ಇದ್ದದರಿಂದ ಜನರಿಗೆ ತಮ್ಮ ಭೂಮಿಯ ಯಾ ಜಾಗದ ಸವಿೂಪ ಪೈಸಾರಿ ಜಾಗವನ್ನು ಕ್ರಯಕ್ಕೆ ಹೆಚ್ಚಿನ ಅಡಚಣೆಗಳಿಲ್ಲದೆ ಕೊಡುತ್ತಿದ್ದರು. ಆದರೆ ಇನ್ನು ಮುಂದಕ್ಕೆ ಅನ್‌ರಿಡೀಮ್ಡ್ ಜಾಗದಲ್ಲಿಯೂ ಗಂಧದ ಮರಗಳಿಗೆ ಅಲ್ಪ ಸ್ವಲ್ಪ ಬೋನಸು ಕೊಡಲು ನಿಬಂಧನೆಗಳನ್ನು ಮಾಡುತ್ತಿರುವುದರಿಂದ ಜನರಿಗೆ ಇನ್ನೊಂದು ಅಡಚಣೆಯನ್ನು ಸರ್ಕಾರದವರು ತಂದೊಡ್ಡುವಂತೆ ಕಾಣುತ್ತದೆ. ಈ ಸಂಬಂಧ ತಿದ್ದುಪಡಿ ಮಾಡಿದ ಕರಡು ನಿಬಂಧನೆಗಳ ಕನ್ನಡ ತರ್ಜುಮೆಯು ಇನ್ನೊಂದು ಕಡೆ ಕೊಡಲಾಗಿದೆ. ರೈತರು ಅರ್ಜಿ ಹಾಕುವ ಜಾಗದಲ್ಲಿ ಗಂಧದ ಮರಗಳಿದ್ದರೆ ಜಾಗವನ್ನು ಮಂಜೂರು ಮಾಡುವ ಮೊದಲು ಚೀಫ್ ಫಾರೆಸ್ಟ್ ಆಫೀಸರ ಸಲಹೆ ತೆಗೆದುಕೊಳ್ಳಬೇಕೆಂದೂ, ಅಲ್ಲಿ 5 ಗಂಧದ ಮರಗಳಿಗಿಂತ ಹೆಚ್ಚು ಇದ್ದು, ಅವರ ಅಭಿಪ್ರಾಯದಲ್ಲಿ ಅದು ಗಂಧ ಬೆಳೆಯಲು ಒಳ್ಳೇ ಜಾಗವೆಂದಾದರೆ ಅದಕ್ಕೆ ಬಂದ ಅರ್ಜಿಗಳನ್ನು ಸಾಧಾರಣವಾಗಿ ತಿರಸ್ಕರಿಸಬೇಕೆಂದೂ ನಿಬಂಧನೆ ಮಾಡಿರುವರು. ಇದರಿಂದ ರೈತರಿಗೆ ಕುಂಬಾ ಕಷ್ಟವಾಗುತ್ತದೆ ತಮ್ಮ ಭೂಮಿಗೆ ಸರಿಯಾದ ಜಾಗವಿಲ್ಲದ ರೈತರು ಮುಖ್ಯವಾಗಿ ಉತ್ತರ ಕೊಡಗಿನಲ್ಲಿ ಅನೇಕರಿರುವರು. ಅಂಥವರು ಕುಷ್ಕಿ ವ್ಯವಸಾಯಕ್ಕೂ, ದನಕರುಗಳನ್ನು ಮೇಯಿಸಲಿಕ್ಕೂ ಸಾಕಷ್ಟು ಜಾಗವಿಲ್ಲದೆ ಎಪರೀತ ತೊಂದರೆಯಲ್ಲಿರುವರು. ಆದುದರಿಂದಲೇ ಈ ವಿಷಯ ಈ ಮೊದಲು ಕೌನ್ಸಿಲು ಸಭೆಯಲ್ಲಿ ಚರ್ಚೆ ನಡಿಸಿದಾಗ್ಯೆ ಸರ್ಕಾರದವರು ಪೈಸಾರಿಯಿಂದ ರೈತರಿಗೆ ಜಾಗ ಕೊಡುವ ವಿಷಯದಲ್ಲಿ ಉದಾರಭಾವದಿಂದ ವರ್ತಿಸುವರೆಂದು ಭರವಸೆಕೊಟ್ಟದ್ದಾಯಿತು. ಈಗ ರೈತರಿಗೆ ಒತ್ತಾಗಿರುವ ಪೈಸಾರಿಯಿಂದ ಜಾಗ ಪಡೆಯಲು ಮೇಲಿನ ಅಡಚಣೆಗಳನ್ನೊಡ್ಡಿದರೆ ಸರ್ಕಾರದವರು ಕೊಟ್ಟ ಭರವಸೆಯನ್ನು ಹಾಳುಮಾಡಿದಂತಾಗುವುದಲ್ಲದೆ, ರೈತರ ಪಾಡು ಮತ್ತಷ್ಟೂ ಶೋಚನೀಯ ಸ್ಥಿತಿಗೆ ಇಳಿಯುವುದರಲ್ಲಿ ಸಂಶಯವಿಲ್ಲ. ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ರೈತರ ಸ್ಥಿತಿಯು ದಿನೇ ದಿನೇ ಹೀನವಾಗುತ್ತಾ ಬರುತ್ತಿರುವ ಈ ಕಾಲದಲ್ಲಿ ಸರ್ಕಾರದವರೇ ವ್ಯವಸಾಯಕ್ಕೆ ಜನರಿಗೆ ಎಲ್ಲಾ ತರಹದ ಅನುಕೂಲತೆಗಳನ್ನು ಮಾಡಿ ಕೊಡುವುದರ ಬದಲು, ಅವರ ಉತ್ಪತ್ತಿಯ ದಾರಿಗೆ ಕಲ್ಲು ಹಾಕುತ್ತಾ ಬರುತ್ತಿರುವುದು ವ್ಯಸನಕರ

ಒಂದು ವೇಳೆ ಅಂಥಾ ಜಾಗವು ಕೊಡಲ್ಪಟ್ಟರೆ ಅದರಲ್ಲಿರುವ ಗಂಧದ ಮರಗಳನ್ನೂ ಮತ್ತು ಅವುಗಳ ಪೋಷಕ ಮರಗಳನ್ನೂ ಕಾಪಾಡುವ ಬಗ್ಗೆ ಜಾಗ ಪಡೆಕೊಳ್ಳುವವನು ಮುಚ್ಚಳಿಕೆ ಮಾಡಿ ಕೊಡಬೇಕೆಂತೆ. ಸರ್ಕಾರದವರು ರೈತರಿಗೆ ಈ ತರಹದ ತೊಂದರೆಗಳನ್ನು ಕೊಡಲು ಯಾಕೆ ಇಚ್ಛಿಸುತ್ತಾರೋ ತಿಳಿಯದು. ಆ ಜಾಗದಲ್ಲಿರುವ ಗಂಧದ ಮರಗಳನ್ನೂ ಉಳಗೊಂಡು ಎಲ್ಲಾ ಮರಗಳನ್ನು ರಿಡೀಮ್ ಮಾಡಿಕೊಂಡು ಈ ಮೊದಲಿನಂತೆ ಜಾಗವನ್ನು ಅರ್ಜಿದಾರರಿಗೆ ಕೊಡಬಹುದು. ಹಾಗೆ ರಿಡೀಮ್ ಮಾಡದಿದ್ದರೂ ಕೂಡ ಇನ್ನು ಮುಂದೆ ಅನ್‌ರಿಡೀಮ್ಡ್ ಜಾಗದಲ್ಲಿಯೂ ಗಂಧದ ಮರಗಳಿಗೆ ಬೋನಸು ಕೊಡಲು ನಿಶ್ಚಯಿಸಿರುವುದರಿಂದ ಜಾಗದ ವಾಲೀಕರು ತಮಗೊಂದು ಭಾಗ ಉತ್ಪತ್ತಿ ದೊರೆಯುವ ಕಾರಣ ಗಂಧದ ಮರಗಳ ಎಚ್ಚರಿಕೆಯನ್ನು ತಾವಾಗಿಯೇ ತೆಗೆದುಕೊಳ್ಳುವುದು ಸ್ವಾಭಾವಿಕವಾಗಿದೆ. ಅಂದ ಮೇಲೆ ಸರ್ಕಾರದವರು ಇನ್ನು ಮೇಲೆ ಮುಚ್ಚಳಿಕೆ ಕೊಡಬೇಕೆಂಬ ನಿರ್ಬಂಧನ್ನು ಹೇರಿಸುವುದು ಅನಾವಶ್ಯಕವೂ ಮತ್ತು ಅನ್ಯಾಯವೂ ಆಗಿದೆ. ಆದುದರಿಂದ ಸರ್ಕಾರದವರು ಅನಾವಶ್ಯಕವಾಗಿ ಜನರಿಗೆ ತೊಂದರೆಯನ್ನುಂಟುಮಾಡುವ ನಿಬಂಧನೆಗಳನ್ನು ಜಾರಿಗೆ ತಂದೆ ಇಷ್ಟರ ವರೆಗೆ ಮಾಡುತ್ತಿದ್ದಂತೆಯೇ ಇನ್ನು ಮುಂದಕ್ಕೂ ಏನೊಂದೂ ಶರತ್ತಿಲ್ಲದೆ ರೈತರಿಗೆ ಸರಾಗವಾಗಿ ಜಾಗಗಳನ್ನು ಕೊಡುತ್ತಾ ಬರುವರಾಗಿ ಆತಿಸುತ್ತೇವೆ.

ದೇಶದ ಶಾಂತಿರಕ್ಷಣೆಯೋ?

'ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಬಿಲ್ಲ್' ವಿಷಯ ಬಾರಿ ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬಂದು ಎರಡು ಸಲವೂ ಬಹುಮತದಿಂದ ತಿರಸ್ಕರಿಸಲ್ಪಟ್ಟಿತು. ಆದರೂ, 'ದೇಶದ ಶಾಂತಿರಕ್ಷಣೆಗಾಗಿ' ಎಂಬ ಶುಭನಾಮಧೇಯದಿಂದ ವೈಸರಾಯರು 1919 ನೇ ಇಂಡಿಯಾ ಆಕ್ಟಿನ 67-B ಪ್ರಕರಣದಲ್ಲಿರುವ ತಮ್ಮ ಅಧಿಕಾರದಿಂದ ಅದನ್ನು, ದೇಶವರ್ಗ ಅಭಿಪ್ರಾಯವನ್ನು ಲೆಕ್ಕಿಸದೆ ಸರ್ಟಿಫೈ ಮಾಡಿರುವರು. ಇವರಿಂದ ಪ್ರಭುತ್ವದ ನಿರಂಕುಶಾ ಪ್ರತಿಭೆಯು ಎಷ್ಟರ ಮಟ್ಟಿಗಿದೆಯೆಂಬುದು ವ್ಯಕ್ತವಾಗುವದು.

ಇಷ್ಟಕ್ಕೆ ತೃಪ್ತರಾಗದೆ, ಪ್ರತಿಯೊಂದು ಪ್ರಾಂತ್ಯದಲ್ಲೂ ಪ್ರಭುತ್ವದವರು ಇದೆ ತೆರನಾದ ಖಾನೂನುಗಳನ್ನು ಜಾರಿಗೆ ತರಲು ಉದ್ಯುಕ್ತರಾಗಿರುವರು. ಬಂಗಾಳ ಮತ್ತು ಅಸ್ಸಾಮಿನ ನ್ಯಾಯವಿಧಾಯಕ ಸಭೆಗಳಲ್ಲಿ ಈ ಪ್ರಕಾರದ ಖಾನೂನುಗಳ ಮಸೂದೆಯೊಂದೊಂದು ಮಂಜೂರಾಯಿತು. ಈಗ ಬೊಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ 1932 ನೇ ಇಸವಿಯ 'ಬೊಂಬೈ ಎಮರ್ಜೆನ್ಸಿ ಪವರ್ಸ್ ಆಕ್ಟನ್ನು' ಶಾಶ್ವತಗೊಳಿಸಲು ಒಂದು ಮಸೂದೆಯು ಬಂದಿದೆ. ಸಂಯುಕ್ತ ಪ್ರಾಂತ್ಯದಲ್ಲೂ 'ಯೂ. ಪಿ. ಸ್ಪೆಸ್ಯಲ್ ಪವರ್ಸ್ ಆಕ್ಟನ್ನು' ಐದು ವರ್ಷಗಳ ವರೆಗೆ ಮುಂದರಿಸಬೇಕೆಂದು ನಿಶ್ಚಯಿಸುವ ಏರ್ಪಾಡಾಗುತ್ತಲಿದೆ. ಇವನ್ನೆಲ್ಲ ನೋಡುವಾಗ್ಗೆ ಪ್ರಜೆಗಳ ಶಾಂತಿರಕ್ಷಣೆಯೆಂಬ ಹಿತವಾದವು ಯಾವ ಸ್ವರೂಪದಲ್ಲಿರುವದೆಂಬದು ಸ್ಪಷ್ಟವಾಗುತ್ತೆ. ಅಖಿಲ ಭಾರತಕ್ಕಾಗಿ ಒಂದು ಖಾನೂನನ್ನೂ ಪ್ರಾಂತ್ಯ ಪ್ರಾಂತ್ಯಕ್ಕೇನೇ ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ಖಾನೂನನ್ನೂ ಜಾರಿಯಲ್ಲಿ ತರಲು ಸರಕಾರದವರು ನಿಶ್ಚಯಿಸಿರುವರು. ಹಾಗೆಂದ ಮೇಲೆ ಪ್ರತಿಯೊಂದು ಪ್ರಾಂತ್ಯದಲ್ಲೂ 'ಕ್ರಿಮಿನಲ್ ಲಾ ಎಮೆಂಡ್ ಮೆಂಟ್' ಎಂಬ ಒಂದು ಶಾಶನವೂ ಮತ್ತು ಆ ಪ್ರಾಂತ್ಯದ ಪ್ರತ್ಯೇಕವಾದ ಮತ್ತೊಂದು ಶಾಶನವೂ ಜಾರಿಯಲ್ಲಿರುವದು. ಇದರಿಂದ ಅಧಿಕಾರಿಗಳಿಗೆ ಎಷ್ಟಿಷ್ಟಾದ ಅಧಿಕಾರಗಳು ದೊರೆತು ಅದರಿಂದ ಅವರ ನ್ಯಾಯದ ದೃಷ್ಟಿಯು ಮುಂದವಾಗಿ ಪ್ರಜೆಗಳ ಹಿತದ ಸಾಧನೆಯಲ್ಲಿ ಪ್ರಜೆಗಳಿಗೆ ಎಷ್ಟಿಷ್ಟಾದ ಪೀಡನೆಯು ಅಧಿಕವಾಗುವದೆಂಬದಕ್ಕೆ ನಿದರ್ಶನಗಳನ್ನು ಕೊಟ್ಟು ನಮ್ಮ ರಾಷ್ಟ್ರೀಯ ಪ್ರತಿನಿಧಿಗಳು ಎಷ್ಟೇ ಹೋರಾಡಿದರೂ ಸರಕಾರದವರು ಪ್ರಜಾಮತವನ್ನು ಧಿಕ್ಕರಿಸಿ ಈ ಪ್ರಕಾರದ ವಿಶೇಷ ಶಾಸನಗಳನ್ನು ಮಂಜೂರುಮಾಡುವದರಿಂದ ನಿರೀಕ್ಷಿಸಿದ ಶಾಂತಿಯೂ, ವ್ಯವಸ್ಥೆಯೂ ದೊರೆಯಲಾರದೆಂಬುದು ನಿಶ್ಚಯ

ಅಲ್ಲದೆ, ದೇಶದಲ್ಲಿನ ರಾಷ್ಟ್ರೀಯ ಜಾಗ್ರತಿಯ ಏದುರು ಸರಕಾರಕ್ಕೆನೇ ಈ ಶಾಸನಗಳ ಬೆಂಬಲವಿಲ್ಲದೆ ನಿಲ್ಲಲು ಸಾಧ್ಯವಿಲ್ಲದಾಗಿದೆಂಬದೂ ಸಹ ಪ್ರತ್ಯಕ್ಷವಾಗುವದು.

ಗಂಧದ ರೂಲ್ಸ್‌ಗಳ ಕೆಲವು ತಿದ್ದುಪಡಿ.

ನಂಬ್ರ 85:—1899 ನೇ (1 of 1899) ಕೊಡಗು ಲ್ಯಾಂಡ್ ಮತ್ತು ರೆವಿನ್ಯೂ ರೆಗ್ಯುಲೇಶನ್‌ನ 42 ಮತ್ತು 143 ರ (1) (F) ಈ ಸೆಕ್ಷನ್‌ಗಳಲ್ಲಿ ಕೊಟ್ಟಿರುವ ಅಧಿಕಾರವನ್ನನುಸರಿಸಿ ಈಚಿನ ತಿದ್ದುಪಡಿಗಳನ್ನೊಳಗೊಂಡ 31—12—1912 ರ ಚೀಫ್ ಕಮಿಷನರ ನೋಟಿಫಿಕೇಷನ್ ನಂ 98 ರ ರೂಲ್ಸ್‌ನಲ್ಲಿ ಈ ಕೆಳಗಿನ ಕರಡು ತಿದ್ದುಪಡಿಗಳನ್ನು ಮಾಡಬೇಕೆಂದಿರುವ ವಿಷಯವನ್ನು ಸಂಬಂಧಪಡುವ ಎಲ್ಲಾ ಜನಗಳ ತಿಳಿವಳಿಕೆ ಬಗ್ಗೆ ಪ್ರಕಟಿಸಲಾಗಿದೆ ಮತ್ತು ಈ ವಿಷಯವು, ಈ ನೋಟಿಫಿಕೇಷನು ಕೊ. ಗೆಜೆಟ್ಟಿನಲ್ಲಿ ಪ್ರಕಟವಾದ ದಿನದಿಂದ 60 ದಿನಗಳ ನಂತರ ಚೀಫ್ ಕಮಿಷನರವರಿಂದ ಯೋಚಿಸಲ್ಪಡುತ್ತದೆಂಬುದನ್ನು ಈ ಮೂಲಕ ತಿಳಿಯಪಡಿಸಿದೆ.

ಸದರಿ ತಿದ್ದುಪಡಿಗಳ ವಿಷಯದಲ್ಲಿ ಮೇಲ್ಕಂಡ 60 ದಿನದೊಳಗೆ ಬರುವ ಯಾವ ಆಕ್ಷೇಪಣೆಗಳಾಗಲೀ ಯಾ ಸಲಹೆಗಳಾಗಲೀ ಚೀಫ್ ಕಮಿಷನರವರಿಂದ ಯೋಚಿಸಲ್ಪಡುತ್ತದೆ

ಕರಡು ತಿದ್ದುಪಡಿಗಳು.

1. 7 ನೇ ರೂಲಿಗೆ ಈ ಪ್ರಕಾರ ಸೇರಿಸತಕ್ಕದ್ದು:—'ಗಂಧದ ಮಂರವುಳ್ಳ ಜಾಗವನ್ನು ಮಂಜೂರು ಮಾಡಿಕೊಡುವುದಕ್ಕೆ ಮೊದಲು ಚೀಫ್ ಫಾರೆಸ್ಟು ಆಫೀಸರ ಸಲಹೆ ತೆಗೆದುಕೊಳ್ಳತಕ್ಕದ್ದು. 5 ಮರಗಳಿಗಿಂತ ಹೆಚ್ಚು ಗಂಧವುಳ್ಳ ಜಾಗವನ್ನು ಫಾರೆಸ್ಟು ಇಲಾಖೆಯವರು, ಆ ಜಾಗವು ಗಂಧ ಬೆಳೆಯಲು ಅಮೂಲ್ಯವಾದ ಜಾಗವೆಂದು ಅಭಿಪ್ರಾಯಪಟ್ಟರೆ ಅಂಥಾ ಸಂದರ್ಭದಲ್ಲಿ ಆ ಜಾಗವನ್ನು ಪಡೆಯಲು ಬಂದಿರುವ ಅರ್ಜಿಗಳು ಸಾಧಾರಣವಾಗಿ ನಿರಾಕರಿಸಲ್ಪಡುತ್ತವೆ.

2. 13 ನೇ ರೂಲಿನ V ನೇ ಕ್ಲಾಸಿನ ಕೊನೆಯಲ್ಲಿ 'ಟಿಂಬರ್ ಬಿಲ್' ಎಂಬ ಪದವಾದ ಮೇಲೆ ಇದನ್ನು ಸೇರಿಸಿಕೊಳ್ಳತಕ್ಕದ್ದು:—'ಮತ್ತು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಟ್ಟ ಅವುಗಳ ಪೋಷಕ ಮರಗಳನ್ನು ಕಾಪಾಡುವುದಕ್ಕೂ'

3. 'ಗಂಧದ ಮಂರವನ್ನೂ ಮತ್ತು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಟ್ಟ ಅವುಗಳ ಪೋಷಕ ಮರಗಳನ್ನೂ ಕಾಪಾಡುವ ಬಗ್ಗೆ ಅವನು ಒಂದು ಒಪ್ಪಂದವನ್ನು ಮಾಡಿಕೊಳ್ಳಬೇಕು.' ಈ ವಾಕ್ಯವನ್ನು '14 ನೇ ರೂಲಿನ 1 ನೇ ಕ್ಲಾಸ್ ಕೊನೆಯಲ್ಲಿ ಸೇರಿಸತಕ್ಕದ್ದು.

4 'ಈ ರೂಲಿನಂತೆ ಗಂಧವುಳ್ಳ ಜಾಗವನ್ನು ಮಂಜೂರು ಮಾಡದಿದ್ದ ಭಾಗದಲ್ಲಿ', ಇದನ್ನು, 19 ನೇ ರೂಲು, ಕ್ಲಾಸ್ 1 ರ 'ಖಾಸ್ಗತ ವ್ಯವಸಾಯಗಾರರು' ಎನ್ನುವುದಾದ ಮೇಲೆ ಸೇರಿಸಿಕೊಳ್ಳಬೇಕು.

5. 'ಮತ್ತು ಫಾರೆಸ್ಟು ಗಂಧದ ಮರವನ್ನೂ ಮತ್ತು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಟ್ಟ ಅವುಗಳ ಪೋಷಕ ಮರಗಳನ್ನೂ ಕಾಪಾಡುವ ಬಗ್ಗೆ ಒಂದು ಒಪ್ಪಂದಕ್ಕೆ ಬರಬೇಕು' ಇದನ್ನು 21 ನೇ ರೂಲಿನ ಕೊನೇ ವಾಕ್ಯದ 2 ನೇ ಕ್ಲಾಸಾಗಿ ಸೇರಿಸತಕ್ಕದ್ದು.

6 'ಮತ್ತು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಟ್ಟ ಪೋಷಕ ಮರಗಳನ್ನು' ಇದನ್ನು 75—ವ ರೂಲಿನ ಕೊನೆಯಲ್ಲಿ ಸೇರಿಸತಕ್ಕದ್ದು.

7 82 ನೇ ರೂಲಿಗೆ 3 ನೇ ನಿಯಮ (Provison) 'ವಾಲೀಕನು ಪದರೀ ಜಾಗದಲ್ಲಿ ಕಂಡು ಬರುವ ಗಂಧದ ಮರಗಳನ್ನೂ ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಡುವ ಪೋಷಕ ಮರಗಳನ್ನೂ ಕಾಪಾಡಲು ಒಂದು ಒಪ್ಪಂದಕ್ಕೆ ಬರುವವನಾಗಿದ್ದರೂ.'

8. 'ಮತ್ತು ತನ್ನ ಜಾಗದಲ್ಲಿ ಹುಟ್ಟುತ್ತಿರುವ ಗಂಧದ ಮರಗಳನ್ನೂ ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಡುವ ಪೋಷಕ ಮರಗಳನ್ನೂ ಕಾಪಾಡುವ ಬಗ್ಗೆ ವಾಲೀಕನು ಒಪ್ಪಂದಾಗುತ್ತಾನೆ.' ಇದನ್ನು 111 ನೇ ರೂಲಿನ ಕೊನೆ ವಾಕ್ಯವಾಗಿ, ಸೇರಿಸತಕ್ಕದ್ದು.

9 'ವಾಲೀಕನು ಜಾಗವನ್ನು ವ್ಯವಸಾಯ ಮಾಡುವುದಕ್ಕೆ ಮೊದಲೇ ಆ ಜಾಗದಲ್ಲಿ ಹುಟ್ಟುತ್ತಿರುವ ಗಂಧದ ಮರಗಳನ್ನು ಫಾರೆಸ್ಟು ಇಲಾಖೆಯವರಿಂದ ಗುರುತುಮಾಡಲ್ಪಡುವ ಪೋಷಕ ಮರಗಳನ್ನೂ ಕಾಪಾಡುವ ಬಗ್ಗೆ ಒಂದು ಒಪ್ಪಂದಕ್ಕೆ ಬಂದಿಲ್ಲದೆ' ಇದನ್ನು 112 ನೇ ರೂಲಿನ ಕೊನೆಯಲ್ಲಿ ಸೇರಿಸತಕ್ಕದ್ದು.

10. 'ಅಲ್ಲದೆ ವಾಲೀಕನು ಯಾವ ಗಂಧದ ಮರವನ್ನೂ ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಡುವ ಪೋಷಕ ಮರಗಳನ್ನೂ ಕಾಪಾಡಲು ಭರವಸೆಕೊಡಬೇಕು.' ಇದನ್ನು 113 ನೇ ರೂಲಿನ ಮೊದಲನೇ ವಾಕ್ಯದ ಕೊನೆಯಲ್ಲಿ ಸೇರಿಸತಕ್ಕದ್ದು.

11. "ವಾಲೀಕನು ಯಾವ ಗಂಧದ ಮರವನ್ನೂ ಮತ್ತು ಫಾರೆಸ್ಟು ಇಲಾಖೆಯವರಿಂದ ಗುರುತು ಮಾಡಲ್ಪಡುವ ಪೋಷಕ ಮರಗಳನ್ನೂ ಕಾಪಾಡಲು ಬದ್ಧನಾಗುತ್ತಾನೆ." ಇದನ್ನು 115ನೇ ರೂಲಿನ (d) ಉದ ಕ್ಲಾಸಾಗಿ ಸೇರಿಸತಕ್ಕದ್ದು.

ನೋಟಿಫಿಕೇಷನ್ ನಂ. 86.

1899 (1 of 1899) ರ ಕೊಡಗು ಲ್ಯಾಂಡ್ ಮತ್ತು ರೆವಿನ್ಯೂ ರೆಗ್ಯುಲೇಶನ್‌ನನುಸರಿಸಿ ಹೊರಡಿಸಿದ್ದ ಮತ್ತು 5—6—1913ನ ಚೀಫ್ ಕಮಿಷನರವರ ನೋಟಿಫಿಕೇಷನ್ ನಂ. 54ರಲ್ಲಿ ಮನೆ ಕಟ್ಟಲು ಖಾಲಿ ಜಾಗಗಳನ್ನು ಕೊಡುವ ವಿಷಯದಲ್ಲಿ ಪ್ರಕಟಿಸಿದ್ದ ರೂಲ್ಸುಗಳಲ್ಲಿ ಮಾಡಬೇಕೆಂದಿರುವ ಈ ತಿದ್ದುಪಡಿಯನ್ನು ಮೇಲಿನ ರೆಗ್ಯುಲೇಷನ್ನಿನ 144ನೇ ಸೆಕ್ಷನ್ನನುಸರಿಸಿ ಸಂಬಂಧಪಡುವ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸಿದೆ ಮತ್ತು ನಕ್ಕನಾ ತಿದ್ದುಪಡಿಗಳು ನೋಟಿಫಿಕೇಶನ್ ಕೊಡಗು ಗಜೆಟ್ಟಿನಲ್ಲಿ ಪ್ರಕಟವಾದ್ದಂದಿನಿಂದ 60 ದಿನಗಳ ನಂತರ ಚೀಫ್ ಕಮಿಷನರವರಿಂದ ಯೋಚಿಸಲ್ಪಡುತ್ತವೆ. ಈ ಬಗ್ಗೆ ಆ 60 ದಿನದೊಳಗೆ ಬರುವ ಯಾವ ಆಕ್ಷೇಪಣೆ ಯಾ ಸಲಹೆಗಳಾಗಲೀ ಚೀಫ್ ಕಮಿಷನರವರಿಂದ ಯೋಚಿಸಲ್ಪಡುತ್ತವೆ.

ಕರಡು ತಿದ್ದುಪಡಿ.

1. 4—A ರೂಲಾಗಿ ಸೇರಿಸಿಕೊಳ್ಳತಕ್ಕದ್ದು. "ಗಂಧದ ಮರವುಳ್ಳ ಜಾಗ—ಗಂಧದ ಮರವುಳ್ಳ ಸಾಧಾರಣ ಜಾಗವು ಈ ರೂಲಿನಂತೆ ಕೊಡಲಾಗುವುದಿಲ್ಲ. ಯಾವ ಸಂದರ್ಭದಲ್ಲಿ ಯಾದರೂ ಅಂಥಾ ಜಾಗವು ಕೊಡಲ್ಪಡೆದಿದ್ದರೆ ಜಾಗವನ್ನು ಬಿಟ್ಟುಕೊಡುವ ಮೊದಲೇ ಫಾರೆಸ್ಟು ಇಲಾಖೆಯವರು ಅಲ್ಲಿನ ಗಂಧವನ್ನು ಕಿತ್ತುಕೊಳ್ಳಲು ಯಾವ ನಿರ್ಬಂಧವೂ ಇಲ್ಲ. ಅಥವಾ ವೇ. ಲ್ಯಾಂ. ರೂಲ್ಸಿನಂತೆ ಗಂಧವನ್ನು ಟಿಂಬರ್ ಜತೆಗೇ ಸೇರಿಸಿ ಟಿಂಬರ್ ವೇಲ್ಯೂ ಕಟ್ಟಬಹುದು. ಈ ಎಂಡನೇ ಸಂದರ್ಭದಲ್ಲಿ ಮೂಶ್ಯ ಜಾಗ ಪಡಕೊಂಡವನು ಟಿಂಬರ್ ವೇಲ್ಯೂ ಕಟ್ಟಿದ್ದನಂತರ ಗಂಧವನ್ನು ಬೇಕಾದಂ ಹಾಳುಮಾಡಬಹುದು.'

2. 4ನೇ (c) ಗೂಲಿನಲ್ಲಿ " ರೆವಿನ್ಯೂ ಅಧಿಕಾರಿಗಳು" ಎಂಬುದಾದ ಮೇಲೆ ವೇ. ಲ್ಯಾಂ. ರೂಲ್ಸಿನಂತೆ" ಎನ್ನುವದನ್ನು ಸೇರಿಸಿಕೊಳ್ಳಬೇಕು.

ಬೆಂಗಳೂರು,
10—8—1935.

ವರ್ತಮಾನ ಸಂಗ್ರಹ.

ಒಳದೇಶ.

ಮಂಗಳೂರಿನಲ್ಲಿ ಈ ವಾರ ಕಾಫಿ ಖಂಡಿಗೆ ರೂ. 180 ಕ್ರಯವೂ, ಯೂಲಕ್ಕಿ ಮಣಕ್ಕೆ ರೂ. 25 ರಿಂದ 26 ರ ವರೆಗೆ ಕ್ರಯವೂ ಇದೆಯೆಂಗಿ ತಿಳಿಯುತ್ತೇವೆ.

ಈ ತಾ 22 ರಲ್ಲಿ ಕುಂದ ಗ್ರಾಮದ ಮೆ. ಕೊಡಂದೆರ ಬೆಳ್ಯಪ್ಪನವರ ಪತ್ನಿಯವರು ಶಿವಾಧೀನರಾದರೆಂದು ತಿಳಿದು ವಿಷಾದಿಸುತ್ತೇವೆ.

ಈ ಬೊದಲು ನಾಪೋಕ್ಲಿನಿಂದ ವೀರಾಜಪೇಟೆಗೆ ಓಡುತ್ತಿದ್ದ ರಾಧಾಕೃಷ್ಣ ಮೋಟಾರು ಸರ್ವಿಸ್ಸು ಈಗ ಪುನ ಅನೇಲ್ಲಿನಿಸಲ್ಲಿ ಎಂದಿನಂತೆ ನಡೆಯುವದೆಂದು ತಿಳಿಸಿರುವರು.

ವಿಶಾಖ ಪಟ್ಟಣದ ಮೋಟಾರಾಗಿ ರೇಂಜಿನಲ್ಲಿ ಫಾಸ್ಟು ರೇಂಜರಾಗಿದ್ದ ಮೆ ಕೊಡಂದೆರ ಸಿ. ದೇವಯ್ಯನವರು ಮೃತ ಪಟ್ಟರುವರೆಂದು ತಿಳಿಯಲು ವ್ಯಸನಪಡುತ್ತೇವೆ

ಬಾಯಿ ಅಕ್ಟೋಬರ್ ಪ್ರಾರಂಭದಿಂದ ಮಡಿಕೇರಿಯಿಂದ ಬೆಟ್ಟಕೇರಿಗಾಗಿ ಭಾಗಮಂಡಲಕ್ಕೆ ಬಸ್ಸು ನಡಿಸಲು ಮೆ. ಬೆಂಳ್ಳಂದಂಡ ತಿಮ್ಮಪ್ಪಯ್ಯರಿಗೆ ಲೈಸೆನ್ಸು ದೊರೆತಿದೆಯೆಂಗಿ ತಿಳಿಯುತ್ತೇವೆ.

ಈ ತಾ. 18,22,23 ರಲ್ಲಿ ವೀರಾಜಪೇಟೆ, ಗೋಣಿಕೊಪ್ಪಲು ಮತ್ತು ಹುದಿಕೇರಿಯಲ್ಲಿ ಸಾರ್ವಜನಿಕ ಸಭೆಗಳು ನೆರೆ, ಗಂಧದ ಎಂದನ ಬೋನಸಿನ ಕಡಿಮೆ ನಿಭಾವಣೆಗಳ ನಿಷೇಧದ ಠರಾವುಗಳು ಪಾಸಾದವು

ಮಡಿಕೇರಿಯಲ್ಲಿ ಈ ವಾರ ಯಾರಿಗೂ ಹೆಚ್ಚಿನದಾಗಿ ಪ್ಲೇಗುರೋಗ ಅಂಟಿಸುವದಿಲ್ಲವಾದರೂ ಇಲಿಗಳು ನಾನಾ ಕಡೆಗಳಲ್ಲಿ ಸಾಯುತ್ತಲಿವೆ ದೇಚವರು ಮತ್ತು ಬ್ರಾಹ್ಮಣ ವ್ಯಾಲಿ ಕಡೆ ಸಹ ಈಗ ಅನೇಕೆಡೆಗಳಲ್ಲಿ ಇಲಿಗಳು ಸಾಯುತ್ತಲಿವೆಯಂತೆ.

ಇಲ್ಲಿಯ ಪೊಲೀಸ್ ಸಬ್ ಇನ್ಸ್‌ಪೆಕ್ಟರರ ಹುದ್ದೆಯಲ್ಲಿ ಖಾಲಿಯಿರುವ ಸ್ಥಳಗಳಿಗೆ ಈ ತಾ. 23 ರಲ್ಲಿ ಜುನಾವಣೆಗಾಗಿ ಕರೆಸಿದ 11 ಅಮೇದುವಾರರ ಪೈಕಿ ಮೆ. ಚೆಟ್ಟಂಗಡ ಚಿಪ್ಪಣ್ಣನವರನ್ನೂ ಮತ್ತು ಮೆ. ಕ್ರಿಶ್ಚಿಯನ್ ನೊರೋನ್ಹರವರನ್ನೂ ಆರಿಸಲ್ಪಟ್ಟವರಾಗಿ ತಿಳಿಯುತ್ತೇವೆ.

ಮದ್ರಾಸು ಸರ್ಕಾರದ ಕೋ-ಆಪರೇಟಿವ್ ರಿಜಿಸ್ಟ್ರಾರರಾದ ಮೆ ಆಸ್ಟನ್‌ರವರು ಈ ತಾ 28 ನೇ ಶನಿವಾರ ಮಡಿಕೇರಿಗೆ ಒಂದು ವಾರ ದಿವಸಗಳ ವರೆಗೆ ಇಲ್ಲಿ ಇದ್ದು ಕೋ ಆ-ಪರೇಟಿವ್ ಸಂಸ್ಥೆಗಳ ವಿಚಾರವಾಗಿ ಇಲ್ಲಿಯ ಮುಖ್ಯ ಅಧಿಕಾರಿಗಳೊಡನೆ ಸಂಭಾಷಿಸುವರೆಂಗಿ ತಿಳಿಯಬರುತ್ತದೆ.

ಪ್ಲೇಗುರೋಗವು ಈಗೆ ಸುತ್ತಮುತ್ತಲಿನ ಪ್ರದೇಶಗಳಿಗೆ ಹರಡಿದೆ. ಈ ವಾರ ಜಂಬೂರು ತೋಟದಲ್ಲಿ ಒಬ್ಬನು ಪ್ಲೇಗಿನಿಂದ ಮೃತಪಟ್ಟನೆಂದೂ, ಸಂಟಿಕೊಪ್ಪಲಿನಲ್ಲಿಯೂ ಒಬ್ಬನು ಪ್ಲೇಗಿನಿಂದ ಮೃತಪಟ್ಟನೆಂದೂ, ಹೆಬ್ಬಾಲೆಯಲ್ಲಿ ಮೂರು ಮಂದಿಗೆ ಪ್ಲೇಗು ರೋಗವು ಅಂಟಿಯುನದಾಗಿಯೂ ವರ್ತಮಾನವಿದೆ.

ಈ ತಾ. 22 ರಲ್ಲಿ ಬಲ್ಯಾಟ್ರಿ ತೋಟದ ಬಳಿ, ಕಿಪ್ಪರಿ ಬಿಟ್ಟದ ಮೆ. ವಾಡರ್ ಲ್ಯಾಂಡ್‌ಸರವರು ಕಾರಿನಲ್ಲಿ ಬರುತ್ತಿದ್ದಾಗ್ಗೆ ಒಬ್ಬ ತೋಟದ ಆಳು ಅಕಸ್ಮಾತ್ತಾಗಿ ಕಾರಿನ ಎದುರುಗಡೆ ಬಂದದ್ದರಿಂದ ಕೆಳಗೆ ಅವನ ಮೇಲೆ ಹಾಯ್ದು ವಿಪರೀತ ಜಖಂ ಹೊಂದಿ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆಂದು ತಿಳಿದುಬಂದಿದೆ.

ಮೈಸೂರು ಫಾರೆಸ್ಟುಗಳ ಚೀಫ್ ಕನ್‌ಸರ್ವೇಟರರು ಕೆಲಸದಿಂದ ನಿವೃತ್ತರಾಗುವ ವೊದಲು ಈ ತಾ 15 ರಿಂದ ಎರಡು ತಿಂಗಳ ರಜೆ ಪಡೆದಿರುವ ಕಾರಣ ಆ ಸಮಯದಲ್ಲಿ ಮೈಸೂರು ಕಿಮೊಗ್ಗ ಪರ್ತಲಿನ ಫಾರೆಸ್ಟು ಕನ್‌ಸರ್ವೇಟರಾಗಿದ್ದ ಮೆ. ಮಿನಿಯಪಂಡ ಯಂ. ಮೂಡ ವ್ಯನವರನ್ನು ಚೀಫ್ ಫಾರೆಸ್ಟ್ ಕನ್‌ಸರ್ವೇಟರಾಗಿ ನೇಮಕವಾಗಿದೆಯೆಂದು ತಿಳಿಸಲು ಸಂತೋಷಪಡುತ್ತೇವೆ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ ವಿಶೇಷ ಅಧಿವೇಶನವು ಅಕ್ಟೋಬರ್ ತಾ 30 ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ಪ್ರಾರಂಭವಾಗುತ್ತದಾಗಿ ಪ್ರಕಟವಾಗಿದೆ.

ಆದಿ ಕಾವೇರಿ ಮೋಟಾರು ಸರ್ವಿಸು ಹೊಸ ಲೈನು ಈ ತಾ. 22 ರಿಂದ ಬೆಳಿಗೆ 8—30 ಕ್ಕೆ ಮಡಿಕೇರಿಯಿಂದ ಹೊರಟು ಮೂರ್ನಾಡು ವೀರಾಜಪೇಟೆ, ಗೋಣಿಕೊಪ್ಪಲು, ಪೊನ್ನಂಪೇಟೆಗಾಗಿ ಹುಣಸೂರಿಗೆ 12—8 ಕ್ಕೆ ತಲಪಿ, ಅಲ್ಲಿಂದ 1—30 ಕ್ಕೆ ಹೊರಟು ಸಾಯಂಕಾಲ 5—30 ಕ್ಕೆ ಮಡಿಕೇರಿಗೆ ಬಂದು ತಲಪುತ್ತದೆಯೆಂದು ತಿಳಿಸಿರುತ್ತಾರೆ.

ಹಿರಿದು ದೇಶ.

ಷಾಹಿದ್‌ಗಂಜ್ ಗುದ್ದಾಲ್ವಾರದ ಸಂಬಂಧ ಜಳಪಳ ನಡಿಸುತ್ತಿದ್ದ ಮೌ. ಮಿಡಾಲ್ಟನ್ಸ್ ಬೆಳ್ಳಾರ್ ಮತ್ತು ಮೌಲ್ವಿ ಇನಾಯತುಲ್ಲಾ ಪತಸ್ಕರು ಎಂಬಿಬ್ಬರನ್ನು ಖೈದುಮಾಡಿದ್ದಾರೆ.

ದರ್ಭಾಂಗದಲ್ಲಿ ವಿಪರೀತ ಮಳೆ. ರಸ್ತೆಗಳಲ್ಲಿ ಸೊಂಟ ಉದ್ದ ನೀರು. ಅನೇಕ ಮನೆಗಳು ಬಿದ್ದಿವೆ. ಜನಗಳು ಮನೆಯ ಮಾಡು ಹತ್ತಿ ಕಾಲಕ್ಷೇಪ. ಕಾಲಕ್ಷೇಪ ಮಾಡುತ್ತಿರುವರು. ಪ್ರಾಣಕ್ಕೂ ಅಸ್ತಿ ಪಾಸ್ತಿಗಳಿಗೂ ಅಪಾಯವಿನ್ನೂ ತಪ್ಪಿಲ್ಲ.

ಗಡಿನಾಡಿನಲ್ಲಿ ಗಲಭೆ ಮಾಡಿ ಶಾಂತಿ ಭಂಗಮಾಡಲು ಪ್ರಯತ್ನಪಡುತ್ತಿರುವ ಮೊಹಮೂನ್ಡ ಪಂಗಡದ ಜನರನ್ನು ಎದುರಿಸಿ ಓಡಿಸಲು ಮೂವತ್ತು ಸಾವಿರ ಬ್ರಿಟಿಷ್ ಮತ್ತು ದೇಶೀಯ ಸೈನಿಕರನ್ನು ಪೇಷಾವರಂಗೂ ಕಾಬೂಲಿಗೂ ಎಂಬ ಊಹೆಗೂ ಮಧ್ಯದಲ್ಲಿ ಶೇಖುಪಡಲಾಗಿದೆ.

1936ನೇ ಇಸವಿಯಲ್ಲಿ ಇಂಗ್ಲಾಂಡಿನ ಕೇಂಬ್ರಿಡ್ಜ್ ಪಟ್ಟಣದಲ್ಲಿ ನಡೆಯುವ ವಿಶ್ವವಿದ್ಯಾನಿಲಯಗಳ ಕಾಂಗ್ರೆಸ್ಸಿಗೆ ಅಣ್ಣಾಮಲೆ ಯೂನಿವರ್ಸಿಟಿಯ ಪರವಾಗಿ ಪ್ರತಿನಿಧಿಯಾಗಿ ಹೋಗಲು ರೈಟ್ ಆನರೇಬಲ್ ವಿ ಎಸ್. ಶ್ರೀನಿವಾಸ ಶಾಸ್ತ್ರಿಗಳನ್ನು ಚುನಾವಣೆ ಮಾಡಿರುತ್ತಾರೆಂದು ಪ್ರಕಟವಾಗಿದೆ.

ಷಾಹಿದ್‌ಗಂಜ್ ದಿನಾಚರಣೆಯ ಉಪಹಾರದಲ್ಲಿ ನಡೆಯಿತು. ಒಂದು ಲಕ್ಷಕ್ಕೂ ಮಿಕ್ಕಿ ಮಹಮ್ಮದೀಯರು, ಪಾಕಿಸ್ತಾನವೊಡಲು ಜಾತಶಾಹಿ ಮಸೀದಿಯಲ್ಲಿ ನೆರೆದಿದ್ದರು. ಅಂದು ಧುಃಖಸೂಚನೆಯ ಉತ್ತುಪುಗಳೂ, ಕಪ್ಪು ಧ್ವಜಗಳೂ ಎಲ್ಲೆಲ್ಲೂ ತುಂಬಿದ್ದುವು ಪೊಲೀಸರ ಬಂದೋಬಸ್ತು ಬಿಗಿಯಾಗಿದ್ದಿತು. ಗಲಾಟೆ ಏನೂ ನಡೆಯಲಿಲ್ಲ.

ವಿಸೆಸ್ ಕಮಲಾ ನೆಹರುಯವರು ಈಜಿಪ್ಟಿಗೆ ಕೊಂಚ ಆರೋಗ್ಯವಾಗಿರುವರು. ಮುಂತರ ಸಾವಿಶ್ಯದಿಂದ ಅವರ ಮನಸ್ಸಿಗೆ ಹರ್ಷವುಂಟಾಗಿ, ಅವರ ಪರಿಣಾಮವೂ ಆಶೆಯ ವೇಪಾಗಿರುವುದು ಆರೋಗ್ಯ ಲಾಭದ ಒಂದು ಕಾರಣವಾಗಿರಬಹುದು. ಸಂಜೆಯ ಜ್ವರವು ಹಾಗೇ ರೀತಿಯಾಗಿದೆ. ಹಣ್ಣಿನ ರಸವೇ ಅವರ ಈಗಿನ ಆಹಾರ ಗಟ್ಟಿ ಆಹಾರವು ಜೀರ್ಣಿಸಲಾಗುವುದಿಲ್ಲ.

ಮಹಾತ್ಮ ಗಾಂಧಿಯವರು ಈ ವರ್ಷದ ಅತ್ಯಧ ವರೆಗೆ ವಾರ್ಧಾದಲ್ಲಿನ್ನು ಅನಂತರ ಅಲ್ಲಿಂದ ಹೈದರಾಬಾದಿಗೂ ಅವರು ಮುಂದಕ್ಕೆ ಎಲ್ಲಿ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಾರೋ ತಿಳಿದಿಲ್ಲ. ಗಾಸಿ ಕೈಗಾರಿಕೆಗಳ ಕೆಲಸವು ಸಾಧಾರಣ ಬಾಯಿ ಕೈಮೆಕ್ಕೆ ಬಂದಿರುವದು. ಅಮದರಿಂದ ಪುನಃ ರಾಜಕೀಯ ಚಳವಳಿಯಲ್ಲಿ ಪ್ರಧಾನ ಭಾಗ ನಹಿಸುವರೋ ಎಂಬುದಾಗಿ ಹಲವರು ಯೋಚಿಸುತ್ತಿದ್ದಾರೆ.

ಬ್ರಿಟಿಷ್ ಸರ್ಕಾರದ ಖಜಾನೆಯಲ್ಲಿ ವಿಶೇಷ ಅನುಭವವನ್ನು ಪಡೆದಿರುವ ಅಧಿಕಾರಿಗಳಾದ ಸರ್ ಆಟೋ ನೀಮೇಯರ್ ಎಂಬವರನ್ನು ಇಂಡಿಯಾ ಸಾಮ್ರಾಜ್ಯ ಆಳ್ವಿಕೆಯಲ್ಲಿ ಸೆಂಟ್ರಲ್ ಗೌರ್ನಮೆಂಟಿಗೂ ಪ್ರಾಂತಿಕ ಗೌರ್ನಮೆಂಟುಗಳಿಗೂ ಹಣಕಾಸಿನ ವಿಷಯದಲ್ಲಿ ಯಾವ ವಿಘ್ನವಾದ ಎತ್ತಾಡುಗಳನ್ನು ಮಾಡಬಹುದೆಂಬ ವಿಷಯವನ್ನು ಪರ್ಯಾಲೋಚಿಸಿ ಸಲಹೆ ಕೊಡಲು ಸರ್ಕಾರದವರು ನೇಮಕ ಮಾಡಿರುತ್ತಾರೆಂದು ಪ್ರಕಟವಾಗಿದೆ.

ಕೊಲಂಬೋ ಪೊಲೀಸರವರಿಗೆ ನೇಟಾರ್ ಬಸ್ಸಿನಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದ ಒಬ್ಬ ಪ್ರಯಾಣಿಕನು ಚಿನ್ನದ ಸರವೊಂದನ್ನು ಕದ್ದಿರಬಹುದೆಂಬ ಅನುಮಾನ ಬಂದು ಅವನ ಗಂಟು ಮೂಟೆಯನ್ನೆಲ್ಲಾ ಶೋಧಿಸಿ ನೋಡಿದರು ಏನೂ ಸಿಕ್ಕಲಿಲ್ಲ. ಅನಂತರ ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಕ್ಸ್-ರೇ ಎಂಬ ವಿದ್ಯುಚ್ಛಕ್ತಿಯ ಕಿರಣಗಳನ್ನು ಅವನ ಮೇಲೆ ಬಿಟ್ಟು ನೋಡಲು ಅವನ ಹೊಟ್ಟೆಯಲ್ಲಿ ಸರವು ಇರುವುದು ಕಂಡು ಬಂದಿತು.

ಅಹಮದಾಬಾದು ಹತ್ತಿರ ಕ್ಷಯಿತಾ ಹಳ್ಳಿಯಲ್ಲಿ ಹರಿಜನರಿಗೂ, ಸವರ್ಣ ಹಿಂದುಗಳಿಗೂ, ಹರಿಜನರ ಹುಡುಗರನ್ನು ಪಬ್ಲಿಕ್ ಶಾಲೆಗಳಿಗೆ ಸೇರಿಸಿಕೊಳ್ಳುವ ವಿಚಾರದಲ್ಲಿ ಗುದರಗೊಳ್ಳ ವೆದ್ದಿತ್ತಷ್ಟೆ ಆದರೆ ಗವರ್ನ್ಮೆಂಟಿನವರು ಹರಿಜನರನ್ನು ಶಾಲೆಗೆ ಸೇರಿಸಿಕೊಳ್ಳದೆ ಹೋದಲ್ಲಿ ಶಾಲೆಗಳ ಗ್ರಾಂಟನ್ನು ನಿಲ್ಲಿಸುತ್ತೇವೆಂದು ತಿಳಿಸಿದ ಮೇಲೆ, ಸವರ್ಣ ಹಿಂದುಗಳು ಸದರಿ ಹುಡುಗರನ್ನು ಸೇರಿಸಿಕೊಳ್ಳಲು ಒಪ್ಪಲೇಬೇಕಾಗಿ ಬಂದಿತು. ಪ್ರಭುತ್ವದವರು ಮಾಡಿದ ನಿರ್ಧಾರವು ಸ್ತುತ್ಯವಾದುದು.

ಮದರಾಸ್ ಸಿಟಿಯಲ್ಲಿ ನಾನಾ ಅಂಗಡಿಗಳಲ್ಲಿಯೂ ಅದರಲ್ಲಿಯೂ ವಿಶೇಷವಾಗಿ ಮುಸಲ್ಮಾನರ ಹೋಟೆಲ್ ಗಳಲ್ಲಿ ಹಗಲಿರಳೂ ಸರ್ವಕಾಲದಲ್ಲಿಯೂ ಗ್ರಾಮೊಫೋನ್ ಹಾಕಿ ಜನರಿಗೆ ಸಂಚಾರಕ್ಕೆ ಅಡಚಣೆಯನ್ನೂ ನೆರೆಹೊರೆಯವರಿಗೆ ಜುಗುಪ್ಸೆಯನ್ನೂ ಮಾಡುತ್ತಿರುವ ದುಷ್ಟ ಪದ್ಧತಿಯನ್ನು ತೊಡೆಯಬೇಕೆಂದು ಸರ್ಕಾರದವರು ಶೀಘ್ರದಲ್ಲಿಯೇ ಒಂದು ಕಾನೂನನ್ನು ಜಾರಿಗೆ ತರುವವರಾಗಿದ್ದಾರೆ. ರಾತ್ರಿ 11 ಘಂಟೆಯಿಂದ ಬೆಳಿಗ್ಗೆ 5 ಘಂಟೆಯ ವರೆಗೆ ಗ್ರಾಮೊಫೋನ್ ಶಬ್ದ ಮಾಡುವವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆಂದೂ ಹೇಳಲಾಗಿದೆ

ಕಲ್ಕತ್ತಾ ಪಟ್ಟಣದಲ್ಲಿರುವ ಮಾರ್ವಾಡಿ ಜಾತಿಯ ಜಾನಕಿಬಾಯಿ ಎಂಬ ಹೆಂಗಸು ಅಜಾಗರೂಕತೆಯಿಂದಲೂ ಅತ್ಯಂತ ರಭಸವಾಗಿಯೂ ಮೋಟಾರನ್ನು ನಡಿಸುತ್ತಾ ಒಬ್ಬ ಕೂಲಿಯುವನಿಗೆ ಢಿಕ್ಕಿ ಹೊಡೆದು ಮೋಟಾರನ್ನು ನಿಲ್ಲಿಸದೆ ಮುಂದಕ್ಕೆ ಬಿಟ್ಟುಕೊಂಡು ಹೋದಲೆಂದು ಪೊಲೀಸಿನವರು ಆಕೆಯ ಮೇಲೆ ಮೊಕದ್ದಮೆ ಮಾಡಿದರು. ಮ್ಯಾಜಿಸ್ಟ್ರೇಟರು ವಿಚಾರಣೆ ನಡಿಸಿ ತಪ್ಪು ಸಾಬೀತಾದುದರಿಂದ ಆಕೆಗೆ 120 ರೂ. ಜುಲ್ಮಾನೆಯನ್ನೂ ಅದನ್ನು ಕೊಡಲು ತಪ್ಪಿದಲ್ಲಿ ಆರು ವಾರಗಳ ಸಜಾ ಶಿಕ್ಷೆಯನ್ನೂ ವಿಧಿಸಿದರು.

ಕಳೆದ ಮೇ ತಿಂಗಳು ತಾ. 9 ರಲ್ಲಿ ಭಾರತ ಪತ್ರಿಕಾಕರ್ತರ ಸಂಘದ ಅಧ್ಯಕ್ಷರಾದ ಶ್ರೀ. ನ್ಯಾಷನಲಕಾಂತಿ ಘೋಷರು ಗಯದಿಂದ ಹೌರಕ್ಕೆ ತಮ್ಮ ಮಕ್ಕಳನ್ನು ಕರೆಕೊಂಡು ಹೋಗುತ್ತಿದ್ದಾಗ ಆಸನ್‌ಸೋಲ್ ಸ್ಟೇಶನ್ನಿನಲ್ಲಿ ರೈಲ್ವೆ ಕೆಸಗಾರರೂ ರೈಲ್ವೆ ಪೊಲೀಸರೂ ಅವರನ್ನು ಕರೆದು ಬೇರೆ ಗಾಡಿಗೆ ಹೋಗಬೇಕೆಂದು ಗದರಿಸಿದರು. ಹೌರಕ್ಕೆ ಮುಟ್ಟುವ ವೊದಲು ಎರಡು ಸಾರಿ ಹೀಗೆ ಮಾಡಿದರು. ಆದರೆ ಶ್ರೀ. ಘೋಷರು ಅವಕ್ಕೆ ಹೆದರಲಿಲ್ಲ. ಹೌರದಲ್ಲಿ ಇಳಿದಾಗ ಅವರನ್ನೂ ಅವರ ಕೆಲಸದವನನ್ನೂ ರೈಲ್ವೆ ಪೊಲೀಸರು ದಸ್ತಗಿರಿ ಮಾಡಿ ಜಾವಿನಿನ ಮೇಲೆ ಬಿಟ್ಟಿದ್ದರು. ಶ್ರೀ. ಘೋಷರು ತಮಗೆ ಉಪದ್ರವ ಕೊಟ್ಟವರ್ಕಾಗಿ ಕಂಪೆನಿಯ ಮೇಲೆ 25,000 ರೂ. ಗಳಿಗೆ ದಾವೆ ಹೂಡಿದರು. ಕಂಪೆನಿಯವರು ಈಗ ಕ್ಷಮಾಪಣೆ ಬೇಡಿರುವರು. ಶ್ರೀ. ಘೋಷರು ದಾವೆಯನ್ನು ವಾಪಸು ತೆಗೆದುಕೊಳ್ಳುವಂತೆ ತಮ್ಮ ವಕೀಲರುಗಳಿಗೆ ತಿಳಿಸಿರುವರೆಂದು ತಿಳಿದುಬರುತ್ತದೆ.

ವಿದೇಶ.

ಬ್ರಿಟಿಷ್ ಸರ್ಕಾರದ ಸಾಲವು ಕಳೆದ ಮಾರ್ಚಿ ತಾ. 31 ಕ್ಕೆ 7 80,40,000 ಪೌಂಡುಗಳಷ್ಟಿದ್ದಿತೆಂದೂ ಇದು ಕಳೆದ ಸಾಲಿಗಿಂತಲೂ 2,68,61,030 ಪೌಂಡಿನಷ್ಟು ಕಡಿಮೆಯಾಗಿದೆಯೆಂದೂ ಪ್ರಕಟವಾಗಿದೆ.

ಆಸ್ಟ್ರೀಯದ ಹತ್ತು ಮಂದಿ ರಾಜನೀತಿಜ್ಞರನ್ನು ಕೊಲ್ಲಬೇಕೆಂದು ಮಾಡಿದ್ದ ಒಂದು ಒಳಸಂಚು ಈಗ ಪ್ರಕಟವಾಗಿದೆ. ದುಷ್ಕರು 10 ಮಂದಿಗೆ ಕಳುಹಿಸಿದ್ದ 10 ಪೊಸ್ಟಲ್ ಪಾರ್ಸೆಲ್‌ಗಳಲ್ಲಿ ಸಿಡಿಯುವ ಪದಾರ್ಥಗಳೇ ತುಂಬಿದ್ದುವು.

ನಮ್ಮ ಚಕ್ರವರ್ತಿಗಳ ತೃತೀಯ ಪುತ್ರರಾದ ಡ್ಯೂಕ್ ಆಫ್ ಗ್ಲೊಸೆಸ್ಟರವರ ಮುತೂ ಲೇಡಿ ಶೀಲಸ್ ಸ್ಕಾಟ್ ರವರ ವಿವಾಹ ಮಹೋತ್ಸವವು ಇದೇ ಬರುವ ನವಂಬರ್ ತಾ. 6 ರಲ್ಲಿ ವೆಸ್ಟ್‌ಮಿನಿಸ್ಟರ್ ಎಬೆಯಲ್ಲಿ ನಡೆಯುವುದಾಗಿದ್ದು, ಅದಕ್ಕಾಗಿ ಅಪೂರ್ವ ಸಿದ್ಧತೆಗಳಾಗುತ್ತಿವೆ.

ಮೆಡಿಟರೇನಿಯನ್ ಸಮುದ್ರದ ಮೇಲೆ ಬ್ರಿಟಿಷ್ ಸರ್ಕಾರದವರು ಇಟ್ಟಿರುವ ನೌಕಾಬಲವು ಸಂಖ್ಯೆಯನ್ನು ಹೆಚ್ಚಿಸಿರುತ್ತಾರೆ, ಜಿಬ್ರಾಲ್ಟರನ್ನು ಸುರಕ್ಷಿತವಾಗಿ ಕಾಪಾಡಲು ವಿಶೇಷ ಪ್ರಯತ್ನಗಳು ನಡೆಯುತ್ತಲಿವೆ. ಈ ಪ್ರಯತ್ನಗಳನ್ನು ನೋಡಿ ಇಟಲೀ ದೇಶದವರು ಸಂಶಯಗ್ರಸ್ತರಾಗಿದ್ದಾರೆಂದು ಹೇಳಲಾಗಿದೆ

